# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಬುಡಕಟ್ಟು ಅಧ್ಯಯನ ವಿಭಾಗ

## ಬೆಳ್ಳಿ ಹಬ್ಬಾಚರಣೆ

**ದಿನಾಂಕ: ೦೧.೭.೨೦೨೦, ಸಮಯ: ಇಳಿಹೊತ್ತು ೩ ರಿಂದ ೫.೩೦ ಗಂಟೆ, ಸ್ಥಳ: ನುಡಿ ಬೋಧನಾಂಗ**

Zoom Meeting
https://us02web.zoom.us/j/9400342679?pwd=SkkyWEljcHAxT2UyblVkYmJLTmFrUT09
Meeting ID: 940 034 2679
Password: KUH2020

## ವೆಬಿನಾರ್

## ಬುಡಕಟ್ಟು ಅಧ್ಯಯನ ವಿಭಾಗ

## ನಡೆದುಬಂದ ದಾರಿ ಮತ್ತು ನಡೆಯಬೇಕಾದ ದಾರಿ

# ವರದಿ



‘ಮಾತೆಂಬುದು ಜೋತಿರ್ಲಿಂಗ’ ಕನ್ನಡ ವಿಶ್ವವಿದ್ಯಾಲಯ ಗೀತೆಯೊಂದಿಗೆ ಕನ್ನಡ ವಿಶ್ವವಿದ್ಯಾಲಯದ ಆವರಣವನ್ನು ಪರಿಚಯಿಸಲಾಯಿತು. ಪಾಂಚಜನ್ಯದ ಜೈ ಭಾರತ ಜಜನಿಯ ತನುಜಾತೆ ಗಾಯನದ ನಂತರ ರಾಜ್ಯಸಭಾ ಟಿವಿಯಲ್ಲಿ ಪ್ರಚಾರಗೊಂಡ ಮೈ ಭೀ ಭಾರತ – ಬೆಟ್ಟ ಕುರುಂಬದ ಪ್ರಾಸ್ತಾವಿಕ ನೋಟ ಪ್ರಸಾರ ಮಾಡಿದ ನಂತದ ***ಪ್ರಾಸ್ತಾವಿಕ ಮತ್ತು ಸ್ವಾಗತವನ್ನು* ಪ್ರೊ ಕೆ ಎಂ ಮೇತ್ರಿ** ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ ಅವರು ಹೀಗೆ ಮಾಡಿದರು.

“ಎಲ್ಲರಿಗೂ ನಮಸ್ಕಾರ, ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ ಬೆಳ್ಳಿಹಬ್ಬಕ್ಕೆ ಎಲ್ಲರಿಗೂ ಸ್ವಾಗತ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲು ಆಗಮಿಸಿದ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ ಸ ಚಿ ರಮೇಶ ಅವರಿಗೆ, ಈ ಕಾರ್ಯಕ್ರಮವನ್ನು ಆನ್ ಲೈನ್ ಮೂಲಕ ಉದ್ಘಾಟಿಸಿ ಮಾತನಾಡಲಿರುವ ಪ್ರೊ ಹಿ ಚಿ ಬೋರಲಿಂಗಯ್ಯ, ಸಂಸ್ಥಾಪಕ ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ ಹಾಗೂ ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ ಅವರಿಗೆ, ***ಮುಖ್ಯ ಅತಿಥಿಗಳಾಗಿ*** ಆಗಮಿಸಿದ **ಪ್ರೊ ಮಾಧವ ಪೆರಾಜೆ,** ಸಂಸ್ಥಾಪಕ ಉಪನ್ಯಾಸಕರು, ಬುಡಕಟ್ಟು ಅಧ್ಯಯನ ವಿಭಾಗ, ಡೀನ್, ವಿಜ್ಞಾನ ನಿಕಾಯ, ಕನ್ನಡ ವಿಶ್ವವಿದ್ಯಾಲಯ ಅವರಿಗೆ, **ಪ್ರೊ ಸಿ ಮಹದೇವ,** ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕನ್ನಡ ವಿಶ್ವವಿದ್ಯಾಲಯ ಅವರಿಗೆ, **ಡಾ ಕೇಶವನ್ ಪ್ರಸಾದ್ ಕೆ,** ವಿಶ್ರಾಂತ ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಅವರಿಗೆ, ***ಬೆಳ್ಳಿಹಬ್ಬದ ಸಿಂಹಾವಲೋಕನಕ್ಕೆ ಉಪಸ್ಥಿತರಿದ್ದು ಮಾತನಾಡಲಿರುವ*** ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳಾದ ಪ್ರೊ ಚಲುವರಾಜು, ಪ್ರೊ ಗಂಗಾಧರ ದೈವಜ್ಞ, ಪ್ರೊ ಎ ಎಸ್ ಪ್ರಭಾಕರ ಅವರಿಗೆ, ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಲಿರುವ ಎಲ್ಲರಿಗೂ ಹಾಗೂ ಬುಡಕಟ್ಟು ಅಧ್ಯಯನ ವಿಭಾಗದ ಅಲುಮ್ನಿ ಮತ್ತು ಪ್ರಸ್ತುತ ಎಂ ಫಿಲ್ ಹಾಗೂ ಪಿಎಚ್ ಡಿ ಸಂಶೋಧನಾರ್ಥಿಗಳವರಿಗೆ ***ವೆಬಿನಾರ್ ತಾಂತ್ರಿಕ ಆಯೋಜಕರುಗಳಾದ,*** **ಶಂಕರಗೌಡ ಎಸ್ ಜಿ,** ಸಹಾಯಕ ಗ್ರಂಥಪಾಲಕರು ಮತ್ತು ಸಂಯೋಜನಾಧಿಕಾರಿಗಳು, ಶೋಧಗಂಗಾ ಹಾಗೂ ಕೃತಿಚೌರ್ಯ ಪತ್ತೆ ತಂತ್ರಾಂಶ, ಅಕ್ಷರ ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯ ಅವರಿಗೆ, **ವಿಜಯೇಂದ್ರ ಎಸ್ ಕೆ,** ಸಹಾಯಕ ನಿರ್ದೇಶಕರು, ಗಣಕ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಅವರಿಗೆ ಹಾಗೂ ಮೀಡಿಯಾ ಸಹಾಯಕರಾದ **ಲೋಕೇಶ ಎಸ್ ಕೆ,** ಅತಿಥಿ ಉಪನ್ಯಾಸಕರು, ಪತ್ರಿಕೋದ್ಯಮ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಅವರಿಗೆ ಸ್ವಾಗತ ಕೋರುತ್ತೇನೆ. ಕಾರ್ಯಕ್ರಮಕ್ಕೆ ಜೂಮ್ ತಂತ್ರಾಂಶ ವೇದಿಕೆ ನೀಡಿ ಸಹಕರಿಸಿದ **ಡಾ ಸುಭಾಶರೆಡ್ಡಿ,** ಗ್ರಂಥಪಾಲಕರು, ಪಿಇಎಸ್ ವಿಶ್ವವಿದ್ಯಾಲಯ, ಬೆಂಗಳೂರು ಅವರಿಗೆ ಕೃತಜ್ಞತೆಗಳು ಮತ್ತು ಈ ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲರಿಗೂ ವಂದಿಸುತ್ತೇನೆ.

ಕನ್ನಡ ಭಾಷೆಗಾಗಿಯೇ ಇರುವ ಏಕೈಕ ಕನ್ನಡ ವಿಶ್ವವಿದ್ಯಾಲಯವು ಬೆಳ್ಳಿಹಬ್ಬ ಸಂಭ್ರಮಾಚರಿಸಿದೆ. ಕರ್ನಾಟಕ ಘನ ಸರ್ಕಾರವು ೧೯೯೧ರ ನವೆಂಬರ್ ೧ರ ಕನ್ನಡ ರಾಜ್ಯೋತ್ಸವದಂದು ಅಧಿಕೃತವಾಗಿ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ಕನ್ನಡದ ಪ್ರಾಚೀನ ಉಜ್ವಲ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಲೋಕವನ್ನು ಶೋಧಿಸುವ ಅನ್ಯ ಶಿಸ್ತುಗಳಲ್ಲಿಯ ಜ್ಞಾನವನ್ನು ಕನ್ನಡೀಕರಿಸುವ ಮತ್ತು ಉನ್ನತ ಶಿಕ್ಷಣದಲ್ಲಿ ಅನ್ವಯಿಸುವ ಉದ್ದೇಶವನ್ನು ಕನ್ನಡ ವಿಶ್ವವಿದ್ಯಾಲಯವು ಹೊಂದಿದೆ.

ಕನ್ನಡ ವಿಶ್ವವಿದ್ಯಾಲಯಕ್ಕೆ ಭೌತಿಕವಾಗಿ ಹಾಗೂ ಬೌದ್ಧಿಕವಾಗಿ ಭದ್ರ ಬುನಾದಿಯನ್ನು ಹಾಕಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ ಚಂದ್ರಶೇಖರ ಕಂಬಾರ ಅವರು ಕನ್ನಡ ವಿಶ್ವವಿದ್ಯಾಲಯ ಕೇವಲ ವಿದ್ಯೆಯನ್ನು ನೀಡುವುದಕ್ಕೆ ಸೀಮಿತವಲ್ಲ ವಿದ್ಯೆಯನ್ನು ಸೃಷ್ಟಿಸುವ ಕೇಂದ್ರವೆಂದು ಕರೆಯುತ್ತ ವಿಶ್ವವಿದ್ಯಾಲಯದ ಆಶಯ ಸ್ವರೂಪವನ್ನು ನಿರ್ಧರಿಸಿ ಅದಕ್ಕೆ ಅನುಗುಣವಾಗಿಯೇ ಬುನಾದಿ ಹಾಕಿರುವರು. ಹಿಂದೆ ವಿದ್ಯಾನಗರವಾಗಿದ್ದ ಈ ಪ್ರದೇಶ ಸಾಮ್ರಾಜ್ಯ ವಿಸ್ತಾರದಿಂದ ವಿಜಯನಗರವಾಗಿ ಈಗ ವಿದ್ಯಾರಣ್ಯವಾಗಿದೆ.

ವಿಶ್ವ ಪರಂಪರೆಯ ಹಂಪಿ ಪರಿಸರದಲ್ಲಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗವು ೧೯೯೪ರ ಜುಲೈ ೧ರಂದು ಹುಟ್ಟಿಕೊಂಡಿದೆ. ಬುಡಕಟ್ಟು ಸಮುದಾಯಗಳನ್ನು ಕುರಿತು ಅಧ್ಯಯನ ಮಾಡುತ್ತಿರುವ ವಿಭಾಗವು ಬೆಳ್ಳಿ ಹಬ್ಬಾಚರಣೆಯಲ್ಲಿದೆ. ಕನ್ನಡ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿಗಳಾಗಿದ್ದ ಪ್ರೊ ಚಂದ್ರಶೇಖರ ಕಂಬಾರ ಅವರ ನಿರ್ದೇಶನದಲ್ಲಿ ಜಾನಪದ ವಿದ್ವಾಂಸರಾದ ಡಾ ಹಿ ಚಿ ಬೋರಲಿಂಗಯ್ಯ ಅವರು ವಿಭಾಗದ ಸಂಸ್ಥಾಪಕ ಮುಖ್ಯಸ್ಥರಾಗಿ ಅನುಪಮ ಸೇವೆ ಸಲ್ಲಿಸಿದ್ದಾರೆ. ಆರಂಭದಿಂದ ಇಲ್ಲಿಯವರೆಗೆ (೦೧.೭.೧೯೯೪ ರಿಂದ ೦೧.೭.೨೦೨೦) ವಿಭಾಗದ ಸದಸ್ಯರಾಗಿ  ೧೦ ಜನ ಅಧ್ಯಾಪಕರು ಸೇವೆ ಸಲ್ಲಿಸಿದ್ದಾರೆ.

| ಕ್ರ ಸಂ | ಹೆಸರು ಮತ್ತು ಜನ್ಮದಿನಾಂಕ | ಪದನಾಮ | ಸೇವಾವಧಿ | |
|---|---|---|---|---|
| | | | ರಿಂದ – ವರೆಗೆ | ವರ್ಷ, ತಿಂಗಳು |
| ೦೧ | ಡಾ ಮಾಧವ ಪೆರಾಜೆ<br>೧೫.೮.೧೯೬೭ | ಉಪನ್ಯಾಸಕ | ೦೧.೭.೧೯೯೪ – ೧೧.೪.೧೯೯೬ | ೧ ವರ್ಷ, ೯ ತಿಂಗಳು |
| ೦೨ | ಡಾ ಗಂಗಾಧರ ದೈವಜ್ಞ<br>೨೩.೧೦.೧೯೬೪ | ಸಂಶೋಧನಾ ಸಹಾಯಕ | ೦೧.೦೭.೧೯೯೪ – ೧೩.೮.೧೯೯೭ | ೩ ವರ್ಷ |
| | | ಉಪನ್ಯಾಸಕ | ೧೪.೮.೧೯೯೭ – ೧೪.೮.೨೦೦೨ | ೫ ವರ್ಷ |
| | | ಹಿರಿಯ ಶ್ರೇಣಿ ಉಪನ್ಯಾಸಕ | ೧೪.೮.೨೦೦೨ – ೧೩.೮.೨೦೦೭ | ೫ ವರ್ಷ |
| | | ಸಹಪ್ರಾಧ್ಯಾಪಕ | ೧೪.೮.೨೦೦೭ – ೧೩.೮.೨೦೧೩ | ೬ ವರ್ಷ |
| | | ಪ್ರಾಧ್ಯಾಪಕ | ೧೪.೮.೨೦೧೩ – | ೭ ವರ್ಷ |
| ೦೩ | ಡಾ ಹಿ ಚಿ ಬೋರಲಿಂಗಯ್ಯ<br>೧೧.೭.೧೯೯೪<br>೨೫.೧೦.೧೯೫೫ | ಪ್ರವಾಚಕ | ೧೧.೭.೧೯೯೪ – ಮೇ ೧೯೯೫ | ೧೦ ತಿಂಗಳು |
| | | ಪ್ರಾಧ್ಯಾಪಕ | ಮೇ ೧೯೯೫ – ೩೧.೧೦.೨೦೧೭ | ೨೨ ವರ್ಷ, ೫ ತಿಂಗಳು |
| ೦೪ | ಪ್ರೊ ಎ ವಿ ನಾವಡ | ಪ್ರವಾಚಕ | ೨೨.೧೧.೧೯೯೪ – ೦೩.೪.೧೯೯೬ | ೧ ವರ್ಷ, ೫ ತಿಂಗಳು |
| ೦೫ | ಡಾ ಕೇಶವನ್ ಪ್ರಸಾದ್ ಕೆ<br>೦೫.೦೧.೧೯೫೮ | ಉಪನ್ಯಾಸಕ | ೦೮.೬.೧೯೯೫ – ೧೪.೮.೧೯೯೭ | ೨ ವರ್ಷ, ೨ ತಿಂಗಳು |
| | | ಪ್ರವಾಚಕ | ೧೪.೮.೧೯೯೭ – ೧೪.೮.೨೦೦೬ | ೯ ವರ್ಷ |
| | | ಪ್ರಾಧ್ಯಾಪಕ | ೧೪.೮.೨೦೦೬ – ೩೧.೦೧.೨೦೨೦ | ೧೩ ವರ್ಷ, ೫ ತಿಂಗಳು |
| ೦೬ | ಡಾ ಚಲುವರಾಜು<br>೦೧.೬.೧೯೬೩ | ಉಪನ್ಯಾಸಕ | ೦೮.೬.೧೯೯೫ – ೦೧.೬.೨೦೦೧ | ೬ ವರ್ಷ |
| | | ಹಿರಿಯ ಶ್ರೇಣಿ ಉಪನ್ಯಾಸಕ | ೦೧.೬.೨೦೦೧ – ೦೧.೬.೨೦೦೬ | ೫ ವರ್ಷ |
| | | ಪ್ರವಾಚಕ | ೦೧.೬.೨೦೦೬–೦೩.೭.೨೦೧೨ | ೬ ವರ್ಷ |
| | | ಪ್ರಾಧ್ಯಾಪಕ | ೦೩.೭.೨೦೧೨ – | ೮ ವರ್ಷ |
| ೦೭ | ಡಾ ಕೆ ಎಂ ಮೇತ್ರಿ<br>೦೧.೮.೧೯೬೨ | ಪ್ರವಾಚಕ | ೨೮.೦೨.೧೯೯೬ – ೨೮.೦೨.೨೦೦೪ | ೮ ವರ್ಷ |
| | | ಪ್ರಾಧ್ಯಾಪಕ | ೨೮.೦೨.೨೦೦೪ – | ೧೬ ವರ್ಷ, ೫ ತಿಂಗಳು |

| | | | | |
|---|---|---|---|---|
| ೦೮ | ಡಾ ಮಲ್ಲಿಕಾರ್ಜುನಗೌಡ ಎಂ<br>೦೧.೦೬.೧೯೬೭ | ಸಂಶೋಧನಾ ಸಹಾಯಕ | ೨೦.೮.೧೯೯೬ – ೦೪.೧೦.೧೯೯೬ | *೨ ತಿಂಗಳು* |
| ೦೯ | ಸಿ ಸಿ ಪೂವಯ್ಯ<br>೧೫.೧೧.೧೯೬೦ | ಸಂಶೋಧನಾ ಸಹಾಯಕ | ೧೬.೬.೧೯೯೭ – ೧೭.೯.೧೯೯೮ | ೧ ವರ್ಷ, ೩ ತಿಂಗಳು |
| ೧೦ | ಡಾ ಎ ಎಸ್ ಪ್ರಭಾಕರ<br>೨೯.೪.೧೯೭೦ | ಉಪನ್ಯಾಸಕ | ೧೬.೮.೧೯೯೭ – ೧೬.೮.೨೦೦೩ | ೬ ವರ್ಷ |
| | | ಹಿರಿಯ ಶ್ರೇಣಿ ಉಪನ್ಯಾಸಕ | ೧೬.೮.೨೦೦೩ – ೧೬.೮.೨೦೦೮ | ೫ ವರ್ಷ |
| | | ಪ್ರವಾಚಕ | ೧೬.೮.೨೦೦೮ – ೧೬.೮.೨೦೧೪ | ೬ ವರ್ಷ |
| | | ಪ್ರಾಧ್ಯಾಪಕ | ೧೬.೮.೨೦೧೪– | ೬ ವರ್ಷ |

ಡಾ ಹಿ ಚಿ ಬೋರಲಿಂಗಯ್ಯ ಅವರು ವಿಭಾಗದ ಸಂಸ್ಥಾಪಕ ಮುಖ್ಯಸ್ಥರಾಗಿ ೨೦೦೩ರವರೆಗೆ ಸೇವೆ ಸಲ್ಲಿಸಿದ್ದಾರೆ. ೨೦೦೩ರಿಂದ ಅಧ್ಯಾಪಕರ ಜೇಷ್ಠತಾ ಅನುಸಾರ ಎರಡು ವರ್ಷಗಳ ಕಾಲಾವಧಿಗೆ ಚಕ್ರಿಯವಾಗಿ ವಿಭಾಗದ ಅಧ್ಯಾಪಕರುಗಳು ಮುಖ್ಯಸ್ಥರುಗಳಾಗಿ ಸೇವೆ ಸಲ್ಲಿಸಿದ್ದಾರೆ. ಅವರುಗಳ ವಿವರ ಹೀಗಿದೆ.

| **ಬುಡಕಟ್ಟು ಅಧ್ಯಯನ ವಿಭಾಗದ ಮುಖ್ಯಸ್ಥರ ವಿವರ** | | |
|---|---|---|
| ಕ್ರ.ಸಂ | ಮುಖ್ಯಸ್ಥರ ಹೆಸರು | ಅವಧಿ |
| ೧ | ಪ್ರೊ ಹಿ ಚಿ ಬೋರಲಿಂಗಯ್ಯ | ೦೧.೭.೧೯೯೪ – ೦೧.೬.೧೯೯೬,<br>೦೧.೧೧.೧೯೯೬ – ೦೬.೦೨.೨೦೦೩ |
| ೨ | ಪ್ರೊ ಕೆ ಎಂ ಮೇತ್ರಿ | ೦೧.೬.೧೯೯೬ – ೦೧.೧೧.೧೯೯೬ (ಪ್ರ),<br>೦೬.೦೨.೨೦೦೩ – ೧೪.೦೨.೨೦೦೫,<br>೦೧.೪.೨೦೧೩ – ೩೧.೩.೨೦೧೫,<br>**೦೨.೩.೩೦೩೦ –** |
| ೩ | ಪ್ರೊ ಕೇಶವನ್ ಪ್ರಸಾದ ಕೆ | ೧೪.೦೨.೨೦೦೫ – ೦೫.೦೨.೨೦೦೭ |
| ೪ | ಪ್ರೊ ಚಲುವರಾಜು | ೦೫.೦೨.೨೦೦೭ – ೨೬.೦೨.೨೦೦೯,<br>೦೧.೪.೨೦೧೫ – ೩೧.೩.೨೦೧೭ |
| ೫ | ಪ್ರೊ ಗಂಗಾಧರ ದೈವಜ್ಞ | ೨೬.೦೨.೨೦೦೯ – ೨೫.೦೨.೨೦೧೧,<br>೦೧.೪.೨೦೧೭ – ೩೧.೩.೨೦೧೯ |
| ೬ | ಪ್ರೊ ಎ ಎಸ್ ಪ್ರಭಾಕರ | ೨೫.೦೨.೨೦೧೧ – ೩೧.೩.೨೦೧೩,<br>೦೧.೪.೨೦೧೯ – ೦೨.೩.೨೦೨೦ |
| ಆಧಾರ: ಕಚೇರಿ ಆದೇಶಗಳು ಮತ್ತು ಹಾಜರಾತಿ ಪುಸ್ತಕ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ | | |



## ಬುಡಕಟ್ಟು ಮಾದರಿ ಗ್ರಾಮ – ಗಿರಿಸೀಮೆ

ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡುವ ಕರ್ನಾಟಕ ರಾಜ್ಯದ ಏಕೈಕ ಬುಡಕಟ್ಟು ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಗ್ರಾಮದ ಪ್ರತಿರೂಪವಾದ ಗಿರಿಸೀಮೆಯಲ್ಲಿದೆ. ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯಾಗಿದ್ದ ಡಾ ಚಂದ್ರಶೇಖರ ಕಂಬಾರ ಅವರ ಕನಸಿನ ಕೂಸೇ ಇದಾಗಿದೆ. ಅವರ ಉಪಸ್ಥಿಯಲ್ಲಿ ದಿನಾಂಕ ೦೮.೮.೧೯೯೪ರಂದು ಗಿರಿಸೀಮೆಯಲ್ಲಿಯ ೧೧ ಕಟ್ಟಡಗಳು ಕರ್ನಾಟಕ ಘನ ಸರ್ಕಾರದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಂ ವೀರಪ್ಪ ಮೊಯಿಲಿ ಅವರ ಅಧ್ಯಕ್ಷತೆಯಲ್ಲಿ ಸಮಾಜ ಕಲ್ಯಾಣ ಸಚಿವರಾಗಿದ್ದ ಶ್ರೀ ಕಾಗೋಡು ತಿಮ್ಮಪ್ಪ ಅವರಿಂದ ಉದ್ಘಾಟನೆಗೊಂಡಿವೆ. ಹೆಸರಿಗೆ ತಕ್ಕಂತೆ ಗಿರಿಜನರು ವಾಸಿಸುವ ಹಿನ್ನೆಲೆಯ ಪರಿಸರವನ್ನು ಇದು ಹೊಂದಿದೆ. ನೂರಾರು ಎಕರೆ ಭೂಮಿಯನ್ನು ಹೊಂದಿರುವ ಇದು ಪಶ್ಚಿಮಘಟ್ಟದ ಇಳಿಜಾರಿನಂತೆ ಬೆಟ್ಟಗಳಿಂದ ಕೂಡಿದೆ. ಇಲ್ಲಿ ೧೯೯೫ರಲ್ಲಿ ಮತ್ತು ೧೯೯೭ರಲ್ಲಿ ಕೆರೆ ನಿರ್ಮಾಣ ಮಾಡಿರುವುದರಿಂದ ಇದರ ಮೆರಗು ಇಮ್ಮಡಿಗೊಳಿಸಿದೆ. ಕೆರೆಯ ದಡದ ದೊಡ್ಡ ಬಂಡೆಯ ಮೇಲೆ ೧೯೯೫ರಲ್ಲಿ ಚೋಮನನ್ನು ಸೃಷ್ಟಿಸಲಾಗಿದೆ. ಹೀಗಾಗಿ ಈ ಕೆರೆಯನ್ನು ಚೋಮನ ಕೆರೆ ಎಂತಲೂ ಕರೆಯುವರು. ಚೋಮನ ಮೂರ್ತಿಯೂ ಆದಿಮ ಮಾನವನ ಜೀವ ಜಗತನ್ನು ತೆರೆದಿಡುತ್ತದೆ. ಇದರ ಅಂಗಳದಲ್ಲಿ ಪ್ರಾಚೀನ ಕಾಲದ ಬಯಲು ಬಂಡೆ ರೇಖಾಚಿತ್ರಗಳು ಆದಿಮಾನವನ ನೆಲೆಯ ಕುರುಹುವಾಗಿ ಸಾಕ್ಷಿಕರಿಸಿವೆ. ಪ್ರವಾಸಿಗರಿಗೆ ಇವು ಖುಸಿ

ಕೊಡುತ್ತವೆ.



ಗಿರಿಸೀಮೆಯಲ್ಲಿ ಗಿಡ, ಮರ, ಬಳ್ಳಿಗಳು ಬೆಳೆದು ನಿಂತಿವೆ. ಇಲ್ಲಿಯ ಒಟ್ಟು ೧೧ ಕಟ್ಟಡಗಳು ಮಲೆನಾಡಿನ ಮಲೆಕುಡಿಯ, ಸೋಲಿಗ, ಯರವ, ಕುಣಬಿ, ಗೊಂಡ, ಹಾಲಕ್ಕಿ ಒಕ್ಕಲಿಗ, ಸಿದ್ದಿ ಮತ್ತು ದೀವರು ಬುಡಕಟ್ಟು ಸಮುದಾಯಗಳ ಮನೆಯ ಮಾದರಿಯನ್ನು ಹೊಂದಿವೆ. ಗಿರಿಸೀಮೆಯ ಮಹಾದ್ವಾರವು ಕಲಾತ್ಮಕವಾಗಿದೆ. ತಮ್ಮ ಕಲಾಕುಂಚದಿಂದ ಶ್ರೀ ಕೆ ಕೆ ಮಕಾಳಿ ಮತ್ತು ಶ್ರೀ  ಹುಸೇನ್ ಅವರು ಗಿರಿಸೀಮೆಗೆ ರಂಗೇರಿಸಿದ್ದಾರೆ. ೧,೪೨೦ ಚದರ್ ಮೀಟರ್ ಕಟ್ಟಡಗಳ ವಿಶೇಷತೆ ಹೀಗಿದೆ.

**ಚಾವಡಿ:** ಗಿರಿಸೀಮೆಯ ದ್ವಾರಬಾಗಿಲು ಪೂರ್ವ ದಿಕ್ಕಿನಲ್ಲಿದೆ. ಅಲ್ಲಿಂದ ಒಳಗಡೆ ಪ್ರವೇಶ ಮಾಡಿದರೆ ಬಲಗಡೆಯಲ್ಲಿ ಕರಾವಳಿ ಕರ್ನಾಟಕದ ಗೊಂಡ ಬುಡಕಟ್ಟಿನ ಕೋಗ್ತಿ ಮಹಾಸತಿ ದೇವಸ್ಥಾನ ಮಾದರಿಯಲ್ಲಿ ನಿರ್ಮಾಣ ಮಾಡಿದ ಕಟ್ಟಡ ಕಾಣಸಿಗುವುದು. ಇದನ್ನೇ ಚಾವಡಿ ಎಂದು ಕರೆಯಲಾಗುತ್ತದೆ. ವಿಶ್ವವಿದ್ಯಾಲಯದ ಆರಂಭಿಕ ಸಾಮಾನ್ಯ ಕಾರ್ಯಕ್ರಮಗಳೆಲ್ಲ ಈ ಕಟ್ಟಡದಲ್ಲಿಯೇ ಜರುಗುತ್ತಿದ್ದವು. ೯.೪.೧೯೯೩ ರಿಂದ ಆರಂಭವಾದ ದಿನಮಾತಿನ ಕೇಂದ್ರ ಸ್ಥಳವೂ ಇದೇ ಆಗಿತ್ತು. ಸರದಿಯಂತೆ ಚಿಂತಕರೊಬ್ಬರೂ ಪ್ರತಿದಿನ ಒಂದು ವಿಷಯ ಕುರಿತು ಇಲ್ಲಿ ಟಿಪ್ಪಣಿ ಮಂಡಿಸುತ್ತಿದ್ದರು. ವಿಶ್ವವಿದ್ಯಾಲಯದ ಎಲ್ಲರೂ ಈ ಮಾತಿನ ಚರ್ಚೆಯಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದರು. ಕಿರಿಯ ಸಂಶೋಧಕರಿಗೆ ಈ ಚರ್ಚೆ ತುಂಬ ಉಪಯುಕ್ತವಾಗುತ್ತಿತ್ತು. ಹೀಗಾಗಿ ಇದನ್ನು ಚಿಂತಕರ ಚಾವಡಿ ಎಂತಲೂ ಕರೆಯಲಾಗುತ್ತಿತ್ತು. ದಿನಮಾತು ಇಲ್ಲಿ ೧೯೯೮ರವರೆಗೆ ಮುಂದುವರೆಯಿತು.



ಚಾವಡಿಯು ದೇಶೀಯ ಸೊಗಡನ್ನು ಪ್ರತಿಬಿಂಬಿಸುತ್ತದೆ. ಒಳಗಡೆ ವಿಶಾಲವಾದ ಪ್ರಾಂಗಣ ಮತ್ತು ವೇದಿಕೆಗಳಿವೆ. ಇದರಲ್ಲಿ ಸುಮಾರು ೭೫ ಜನರು ಕುಳಿತುಕೊಳ್ಳಲು ಸ್ಥಳಾವಕಾಶವಿದೆ. ಒಳಗಿನ ಒಂದು ವೇದಿಕೆಯಲ್ಲಿ ಕೋಗ್ತಿ ಮಹಾಸತಿ ಮತ್ತು ಅದರ ಪರಿವಾರದ ದೈವಗಳ ಪ್ರತಿ ರೂಪದ ಮೂರ್ತಿಗಳು ಮನಮೋಹಕವಾಗಿವೆ. ೧೯೯೪ ರಿಂದ ೨೦೧೯ರವರೆಗೆ ಈ ಕಟ್ಟಡದಲ್ಲಿ ಬುಡಕಟ್ಟು ಅಧ್ಯಯನ ವಿಭಾಗದ ಕಾರ್ಯಾಲಯ ಕಾರ್ಯನಿರ್ವಹಿಸಿದೆ.

**ದೀವರ ಮನೆ:** ಚಾವಡಿಯ ಪಕ್ಕದಲ್ಲಿ ಮಹಾದ್ವಾರದ ಎಡಭಾಗದಲ್ಲಿ ಮಲೆನಾಡಿನ ದೀವರು ಸಮುದಾಯವನ್ನು ಪ್ರತಿನಿಧಿಸುವ ಕಟ್ಟಡವಿದೆ. ಇದನ್ನು ದೀವರ ಮನೆ ಎಂದು ಕರೆಯಲಾಗುವುದು. ದೀವರ ಆಹಾರ ಕ್ರಮ ವಿಶಿಷ್ಟವಾಗಿರುವುದು. ಈ ಮನೆಯು ಹಲವಾರು ಕಾರ್ಯಕ್ರಮಗಳ ಸಂದರ್ಭಗಳಲ್ಲಿ ಪಾಕಶಾಲೆಯಾಗಿ ಉಪಯೋಗವಾಗಿದೆ. ೨೦೦೭–೦೮ರಲ್ಲಿ ಈ ಮನೆಯ ಜೀರ್ಣೋದ್ಧಾರವಾಗಿದೆ. ೨೦೧೩ ರಿಂದ ಈ ಕಟ್ಟಡವನ್ನು ಭಾರತ ಸರ್ಕಾರದ ಐಸಿಎಸ್‌ಎಸ್‌ಆರ್ ಪ್ರಾಯೋಜಿತ Educational Status of Scheduled Tribes of Karnataka – Goa: Attainments and Challenges **ಅಧ್ಯಯನ ಯೋಜನೆಯ ನಿರ್ವಹಣೆಗಾಗಿ ಬಳಕೆಯಾಗಿದೆ.**

**ಗೊಂಡರ ಮನೆ:** ಅಲೆಮಾರಿ ರಾಜಗೊಂಡರು ಮತ್ತು ಹೈದರಾಬಾದ–ಕರ್ನಾಟಕ ಪ್ರದೇಶದ ಗೊಂಡರಿಗಿಂತಲೂ ಕರಾವಳಿ–ಕರ್ನಾಟಕ (ಮುಂಬೈ–ಕರ್ನಾಟಕ) ಪ್ರದೇಶದ ಗೊಂಡರು ಭಿನ್ನರು. ದೇಶದಲ್ಲಿ ೬೦ಕ್ಕೂ ಹೆಚ್ಚಿನ ಒಳಪಂಗಡಗಳನ್ನು ಹೊಂದಿರುವ ಗೊಂಡರು ಭಾರತ ದೇಶದ ಬುಡಕಟ್ಟುಗಳಲ್ಲೇ ಅತ್ಯಧಿಕ ಸಂಖ್ಯೆಯಲ್ಲಿರುವರು. ಗೊಂಡ ಬುಡಕಟ್ಟಿನ ನೆನಪಿಗಾಗಿ ಉತ್ತರ ಕನ್ನಡ ಜಿಲ್ಲೆಯ ಗೊಂಡರ ಮನೆಯ ಮಾದರಿಯಲ್ಲಿ ಕಟ್ಟಡವೊಂದನ್ನು ಗಿರಿಸೀಮೆಯಲ್ಲಿ ನಿರ್ಮಿಸಲಾಗಿದೆ. ಇದನ್ನೇ ಗೊಂಡರ ಮನೆ

ಎಂದು ಕರೆಯಲಾಗುವುದು. ಈ ಕಟ್ಟಡದಲ್ಲಿ ವಿಭಾಗದ ಹಿರಿಯ ಪ್ರಾಧ್ಯಾಪಕರಾಗಿದ್ದ ಡಾ ಹಿ ಚಿ ಬೋರಲಿಂಗಯ್ಯ ಅವರು ಕಾರ್ಯನಿರ್ವಹಿಸಿರುವರು.

**ಕುಣಬಿ ಮನೆ:** ಗೋವಾ ಮೂಲದ ಕುಣಬಿ, ಗಾವಡೆ, ವೆಲಿಪ್ ಬುಡಕಟ್ಟಿನವರು ಕರಾವಳಿ ಕರ್ನಾಟಕದಲ್ಲೂ ಕಾಣಸಿಗುವರು. ಇವರನ್ನು ಇಲ್ಲಿ ಕುಣಬಿ, ಕುಡುಬಿ, ಮರಾಟಿ ಎಂತಲೂ ಕರೆಯಲಾಗುವುದು. ಇವರು ಕುಮ್ರಿ ಬೇಸಾಯದಲ್ಲಿ ನಿರತರಾಗಿರುವುದರಿಂದ ಕುಣಬಿಗಳೆಂದೇ ಹೆಸರುವಾಸಿಯಾದವರು. ಇಂದಿಗೂ ಇವರ ಲಾವಂಚ ಬೆಳೆಯು ಕುಮ್ರಿ ಬೇಸಾಯಕ್ಕೆ ಕೈಗನ್ನಡಿಯಾಗಿದೆ. ಈ ಬುಡಕಟ್ಟಿನ ಮಾದರಿ ಮನೆಯೊಂದನ್ನು ಬುಡಕಟ್ಟು ಗ್ರಾಮ ಗಿರಿಸೀಮೆಯಲ್ಲಿ ನಿರ್ಮಿಸಲಾಗಿದೆ. ಈ ಮನೆಯು ೧೯೯೭ರವೆಗೆ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯದ ಪುಸ್ತಕಗಳ ನೆರಳಚ್ಚಿಗಾಗಿ ಬಳಸಲಾಗುತ್ತಿತ್ತು. ಆ ನಂತರ ವಿಭಾಗದ ಪ್ರಾಧ್ಯಾಪಕರಾದ ಡಾ ಕೆ ಎಂ ಮೇತ್ರಿ ಅವರು ೨೦೧೯ರವರೆಗೆ ಇಲ್ಲಿ ಕಾರ್ಯನಿರ್ವಹಿಸಿದರು.

**ಸೋಲಿಗರ ಮನೆ:** ತಮಿಳು ಮೂಲದ ಶೋಲಗ ಪದ ಕನ್ನಡಕ್ಕೆ ಬಂದಾಗ ಸೋಲಿಗ ಆಗುವುದಾಗಿ ಭಾಷಾತಜ್ಞರ ಅಭಿಪ್ರಾಯ. ಸೋಲಿಗರು ಮಲೈಮಾದೇಶ್ವರಬೆಟ್ಟ, ಬಿಳಿಗಿರಿ ರಂಗನಬೆಟ್ಟ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಸಿಗುವರು. ಇವರಲ್ಲಿ ಆದಿಮ, ಶೈವ ಮತ್ತು ವೈಷ್ಣವ ಮತಗಳ ಪ್ರಭಾವ ಕಂಡುಬರುವುದು. ಕರ್ನಾಟಕದ ಹಲವೆಡೆ ಇವರು ಜೇನು ಕುರುಬ ಎಂದು ಹೇಳಿಕೊಳ್ಳುವರು. ಮಲೆನಾಡಿನ ಸೋಲಿಗರ ಮನೆಯ ಮಾದರಿಯಲ್ಲಿ ಗಿರಿಸೀಮೆಯ ಬೆಟ್ಟದ ಹೊಟ್ಟೆಯಲ್ಲಿ ಕಟ್ಟಡವೊಂದನ್ನು ನಿರ್ಮಿಸಲಾಗಿದೆ. ಇದನ್ನೇ ಸೋಲಿಗರ ಮನೆ ಎಂದು ಕರೆಯಲಾಗುವುದು. ಈ ಕಟ್ಟಡವು ೧೯೯೯ರವರೆಗೆ ಅತಿಥಿಗೃಹವಾಗಿ ಬಳಕೆಯಾಗಿರುವುದು, ಆನಂತರದಲ್ಲಿ ವಿಭಾಗದ ಪ್ರಾಧ್ಯಾಪಕರಾದ ಡಾ ಕೇಶವನ್ ಪ್ರಸಾದ್ ಕೆ ಅವರು ೨೦೧೫ರವರೆಗೆ ಸಂಶೋಧನೆಯ ಚಟುವಟಿಕೆಗಳಿಗಾಗಿ ಬಳಸಿದ್ದಾರೆ.

**ಯರವರ ಮನೆ:** ಕೇರಳದ ಅಡಿಯರಿಗೆ ಕರ್ನಾಟಕದಲ್ಲಿ ಯರವರು ಎಂದು ಗುರುತಿಸಲಾಗುತ್ತದೆ. ಯರವರಲ್ಲಿ ಪಣಿ ಯರವ, ಪಂಜರಿ ಯರವ ಎಂಬೀತ್ಯಾದಿ ಪ್ರಭೇದಗಳು ಉಂಟು. ಅಡಿಯನ್ ಮತ್ತು ಯರವ ಸಮುದಾಯಗಳು ಸಾಮಾಜಿಕ ಸ್ಥಾನಮಾನದ ಕೊರತೆಯನ್ನು ಅನುಭವಿಸುತ್ತಿರುವ ಮಲೆನಾಡಿನ ಬುಡಕಟ್ಟುಗಳು. ಹೀಗಾಗಿ ಇವರು ತಮ್ಮನ್ನು ತಾವು ರಾವುಲ ಎಂದು ಕರೆದುಕೊಳ್ಳಲು ಬಯಸುವರು. ಇವರ ಮನೆಯ ಮಾದರಿಯಲ್ಲಿಯೇ ಗಿರಿಸೀಮೆಯಲ್ಲಿ ಒಂದು ಮನೆ ಕಟ್ಟಲಾಗಿದೆ. ಇದನ್ನೇ ಯರವರ ಮನೆ ಎಂದು ಕರೆಯಲಾಗುತ್ತದೆ. ಈ ಕಟ್ಟಡವು ೧೯೯೯ರವರೆಗೆ ಅತಿಥಿಗೃಹವಾಗಿ ಬಳಕೆಯಾಗಿರುವುದು, ಆನಂತರದಲ್ಲಿ ವಿಭಾಗದ ಪ್ರಾಧ್ಯಾಪಕರಾದ ಡಾ ಗಂಗಾಧರ ದೈವಜ್ಞ ಅವರು ಸಂಶೋಧನೆಯ ಚಟುವಟಿಕೆಗಳಿಗಾಗಿ ೨೦೧೯ರವರೆಗೆ ಬಳಸಿರುವರು.

**ಹಾಲಕ್ಕಿ ಒಕ್ಕಲಿಗರ ಮನೆಗಳು:** ಕರಾವಳಿ ಕರ್ನಾಟಕದಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆಗೆ ಹೆಸರಾಗಿರುವ ಬುಡಕಟ್ಟೇ ಹಾಲಕ್ಕಿ ಒಕ್ಕಲಿಗ ಸಮುದಾಯ. ಉತ್ತರ ಕನ್ನಡ ಜಿಲೆಯಲ್ಲಿ ಕಾಣಸಿಗುವ ಇವರು ಪ್ರಕೃತಿ ಪ್ರಿಯರು. ಆದಿಮ ಬದುಕಿನ ಕೊಂಡಿಗಳು. ಇವರ ಸಮೂಹ ಮನೆಗಳು ಸಂಘಜೀವನದ ದರ್ಶನವನ್ನು ನೀಡುತ್ತವೆ. ಈ ಮಾದರಿಯ ಕಟ್ಟಡವೊಂದನ್ನು ಗಿರಿಸೀಮೆಗೆ ವಿಶೇಷ ಮೆರುಗನ್ನು ನೀಡಿದೆ. ಈ ಸಮೂಹ ಕಟ್ಟಡಕ್ಕೆ ಹಾಲಕ್ಕಿ ಮನೆಗಳು ಎಂದು ಕರೆಯಲಾಗುವುದು. ಇಲ್ಲಿ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯವು ೧೯೯೭ರವರೆಗೆ ಕಾರ್ಯನಿವಹಿಸಿತು. ಆ ನಂತರ ಜಾನಪದ ಅಧ್ಯಯನ ವಿಭಾಗ, ನಂತರ ದೃಶ್ಯಕಲಾ ವಿಭಾಗಗಳು ಈ ಕಟ್ಟಡದಲ್ಲಿ ಕಾರ್ಯನಿರ್ವಹಿಸಿದವು. ೨೦೦೭ರಿಂದ ಇಲ್ಲಿಯ ೩ ಕಟ್ಟಡಗಳು ವಿಭಾಗದ ಮುಖ್ಯಸ್ಥರ ಕಚೇರಿಯಾಗಿ, ವಿಭಾಗದ ಕಚೇರಿಯಾಗಿ ಹಾಗೂ ಬುಡಕಟ್ಟು ಗ್ರಂಥಾಲಯವಾಗಿ ಬಳಕೆಯಾದವು. ಪ್ರೊ ಚಲುವರಾಜು ಅವರು

ಇಲ್ಲಿಯೇ ೨೦೧೫ ರಿಂದ ೨೦೧೮ರವರೆಗೆ ಕಾರ್ಯನಿರ್ವಹಿಸುವರು. ಆನಂತರ ವಿಭಾಗದ ಕಚೇರಿಯು ಚಾವಡಿಗೆ ಸ್ಥಳಾಂತವಾಯಿತು.



**ಸಿದ್ದಿಯರ ಮನೆ:** ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುವ ಸಿದ್ದಿಯರು ೨೦೦೩ರಲ್ಲಿ ಪರಿಶಿಷ್ಟ ವರ್ಗಕ್ಕೆ ಹೊಸದಾಗಿ ದಾಖಲಾದವರು. ಇವರು ಆಫ್ರಿಕ ಮೂಲದ ನೀಗ್ರೊ ಜನಾಂಗಕ್ಕೆ ಸೇರಿದವರು. ವಸಾಹತುಕಾಲದ ಆಡಳಿತದಲ್ಲಿ ಇವರನ್ನು ಆಫ್ರಿಕದಿಂದ ಭಾರತಕ್ಕೆ ಹಡಗುಗಳಲ್ಲಿ ಕೆಲಸಕ್ಕಾಗಿ ಕರೆತರಲಾಯಿತ್ತೆಂದು ಹೇಳಲಾಗುವುದು. ಕಾಲಾಂತರದಲ್ಲಿ ಇವರಲ್ಲಿ ಹಲವರು ಭಾರತದ ಕರ್ನಾಟಕ, ಗೋವ ಮತ್ತು ಗುಜರಾತ ರಾಜ್ಯಗಳಲ್ಲಿ ನೆಲೆಕಂಡರು. ಇವರು ಕಾಲದ ಪ್ರಭಾವಕ್ಕೊಳಗಾಗಿ ಆದಿಮ ಧರ್ಮದಿಂದ ಹಿಂದೂ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಿಗೆ ಮತಾಂತರ ಹೊಂದಿರುವರು. ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗದ ಮನೆಯ ಮಾದರಿಯಲ್ಲಿ ಮನೆಯೊಂದನ್ನು ಗಿರಿಸೀಮೆಯಲ್ಲಿ ಕಟ್ಟಲಾಗಿದೆ. ಇದನ್ನೇ ಸಿದ್ದಿಯರ ಮನೆ ಎಂದು ಕರೆಯಲಾಗುವುದು. ೨೦೦೩ರವರೆಗೆ ಬುಡಕಟ್ಟು ವಸ್ತು ಸಂಗ್ರಹಾಲಯಕ್ಕಾಗಿ ಈ ಕಟ್ಟಡವನ್ನು ಬಳಸಲಾಯಿತು. ಆ ನಂತರ ವಿಭಾಗದ ಪ್ರೊ ಎ ಎಸ್ ಪ್ರಭಾಕರ ಅವರು ಇಲ್ಲಿ ೨೦೧೯ರವೆರೆಗೆ ಕಾರ್ಯನಿರ್ವಹಿಸಿದರು. ಈ ಮನೆಯು ೨೦೦೭ ಮತ್ತು ೨೦೧೭ರಲ್ಲಿ ಜೀರ್ಣೋದ್ಧಾರವಾಯಿತು.

**ಮಲೆಕುಡಿಯರ ಮನೆ:** ಕುಡಿಯ, ಮಲೆಕುಡಿಯ, ಮಲಯೇಕಂಡಿ ಮತ್ತು ಮಲೇರು ಎಂಬೀ ಹೆಸರಿನ ಬುಡಕಟ್ಟು ಕರ್ನಾಟಕದ ಮಲೆನಾಡಿನಲ್ಲಿದೆ. ಇವರು ಮಲೆಗಳ ಕುಡಿಗಳಲ್ಲಿ ವಾಸಿಸುವುದರಿಂದ ಇವರಿಗೆ ಈ ಹೆಸರು ಬಂದಿವೆ. ಇವರ ಮನೆಯ ಮಾದರಿಯಲ್ಲಿ ಗಿರಿಸೀಮೆಯ ಬೆಟ್ಟದ ಹೊಟ್ಟೆಯಲ್ಲಿ ಪುಟ್ಟ ಮನೆಯೊಂದನ್ನು ಬಿದಿರಿನಿಂದ ನಿರ್ಮಿಸಲಾಗಿದೆ. ಹಿಂದೆ ಈ

ಮನೆಯಲ್ಲಿ ಕವಿಗಳು ಕವಿತೆಗಳನ್ನು ಕಥೆಗಾರರು ಕಥೆಗಳನ್ನು ರಚಿಸುತಿದ್ದರು. ಸಿಥಿಲಾವಸ್ಥೆಯಲ್ಲಿರುವುದರಿಂದ ಇದನ್ನು ಬಳಸಲು ಸಾಧ್ಯವಾಗುತ್ತಿಲ್ಲ. ಇಲ್ಲಿ ವನ್ಯಜೀವಿಗಳಾದ ಕರಡಿ, ಚಿರತೆಗಳು ವಿಶ್ರಾಂತಿ ಪಡೆಯುತ್ತಿರುವ ಕುರುಹುಗಳು ಲಭ್ಯವಾಗುತ್ತಿವೆ.

**ಗಿರಿವನ:** ಗಿರಿಸೀಮೆಯು ಹೆಸರಿಗೆ ತಕ್ಕಂತೆ ಗಿರಿಜನರು ವಾಸಮಾಡುವ ಬೆಟ್ಟಗಳಿಂದ ಮತ್ತು ಪಶ್ಚಿಮ ಘಟ್ಟದಲ್ಲಿ ಇರುವಂತೆ ಕಾಡಿನ ತೋಪುಗಳಿಂದ ಕೂಡಿದೆ. ಇದಕ್ಕೆ ಸಾಕ್ಷಿಯಾಗಿ ಇಲ್ಲಿ ಹಣ್ಣಿನ ಗಿಡಗಳು, ಔಷಧಿ ಗಿಡಗಳು, ಹೂವಿನ ಗಿಡಗಳು ಬೆಳೆದು ನಿಂತಿವೆ. ಅಲಂಕಾರಿಕ ಗಿಡಗಳಲ್ಲಿ ಕಾಗದ ಹೂವು, ಕಣಗಿಲ ಹೂವು, ಮಲ್ಲಿಗೆ ಹೂವು, ದಾಸವಾಳ ಹೂವು, ಗುಲಾಬಿ ಹೂವು, ಲಾಟಿನ್ ಹೂವಿನ ಗಿಡಗಳು ಗಿರಿಸೀಮೆಯ ಅಂದ ಇಮ್ಮಡಿಗೊಳಿಸಿವೆ. ಅಂಜೂರ ಗಿಡ, ದಾಳಿಂಬೆ ಗಿಡ, ಸಪೋಟ ಗಿಡ, ಸೀತಾಫಳ ಗಿಡ, ನಿಂಬೆ ಹಣ್ಣಿನ ಗಿಡ, ಪ್ಯಾರಲ ಗಿಡ, ಬಾದಾಮಿ ಗಿಡ, ನುಗ್ಗೇ ಗಿಡ, ಆಡವಿ ಹುಣಸೆ ಗಿಡ, ಗೋಡಂಬಿ ಗಿಡ, ಮಾವಿನ ಮರ, ಹಲಸಿನ ಮರ, ತೆಂಗಿನಮರ, ಹುಣಸೆ ಮರ, ಬೇವಿನ ಮರ, ಆಕಾಶ ಮಲ್ಲಿಗೆ ಮರ, ಆಲದ ಮರ, ಅಶೋಕ ಮರ, ಗೋಲ್ಡ್ ಗಿಡ, ಸಿರ್ಸಿಲ ಮರ, ಬಿದಿರಿನ ಮರ, ರಬ್ಬರ್ ಮರ, ಬನ್ನಿಮರ, ಅರಳಿಮರ, ಬುಗರಿಮರ, ಬಸವನಪಾದ ಮರ, ಅತ್ತಿಮರ, ಮತ್ತಿಮರ, ತಟಸಿ ಗಿಡ, ಬೀಟಿ ಮರ, ಹೊಂಗೆ ಮರಗಳು, ಅಲ್ಲದೆ ಜಾನಿ, ಗೊರಸಿ, ತುಗ್ಗಿಲಿ, ಬಾರೆಯಂತಹ ಕಾಡು ಜಾತಿಯ ಮರಗಳು, ಮಲೆನಾಡಿನಲ್ಲಿ ಬೆಳೆದು ನಿಲ್ಲುವಂತೆ ಬೆಳೆದು ನಿಂತಿವೆ. ಆದ್ದರಿಂದ ಗಿರಿಸೀಮೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಒಂದು ವಿಶಿಷ್ಟ ವನಕೇಂದ್ರವಾಗಿದೆ, ಆ ಕಾರಣಕ್ಕಾಗಿಯೇ ಇದು ವನ್ಯಜೀವಿಗಳ ವಾಸತಾಣವೂ ಆಗಿದೆ. ಇಲ್ಲಿ ನವಿಲು, ಗಿಳಿ, ಬುರುಳಿ, ಕೌಜುಗ, ನಾನಾ ರೀತಿಯ ಹಕ್ಕಿಗಳ ಕಲರವ ಕೇಳಿಸುವುದರೊಂದಿಗೆ ವಿವಿಧ ಜಾತಿಯ ಹಾವುಗಳು, ಮೊಲ, ಉಡ, ಮಿಕಗಳು ಸಾಮಾನ್ಯವಾಗಿ ಕಾಣಸಿಗುತ್ತವೆ. ಆಗೊಮ್ಮೆ ಈಗೊಮ್ಮೆ ಕರಡಿ, ಚಿರತೆ, ತೋಳ, ನರಿಗಳ ದರ್ಶನವೂ ಇಲ್ಲಿ ಆಗುವುದುಂಟು.

**ವಿಭಾಗದ ಹೊಸ ಕಟ್ಟಡ:** ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ೧೨ನೇ ಯೋಜನೆಯಡಿಯಲ್ಲಿ ರೂ. ೧ ಕೋಟಿ ಅನುದಾನದ ಬುಡಕಟ್ಟು ಅಧ್ಯಯನ ವಿಭಾಗದ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಮಂಜೂರು ಮಾಡಿದ್ದರ ಹಿನ್ನೆಲೆಯಲ್ಲಿ ಕುಲಪತಿಗಳಾಗಿದ್ದ ಪ್ರೊ ಹಿ ಚಿ ಬೋರಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ನಾಡೋಜ ಪ್ರೊ ಸಿದ್ಧಲಿಂಗಯ್ಯ ಅವರು ದಿನಾಂಕ ೦೪.೭.೨೦೧೫ರಂದು ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿಸಿದರು. ಕುಲಪತಿಗಳಾಗಿದ್ದ ಪ್ರೊ ಮಲ್ಲಿಕಾ ಎಸ್ ಘಂಟಿ ಅವರ ಅಧ್ಯಕ್ಷತೆಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರಾಗಿದ್ದ ಶ್ರೀ ಬಸವರಾಜ ರಾಯರಡ್ಡಿ ಅವರ ಮುಖ್ಯ ಅತಿಥ್ಯದಲ್ಲಿ ಕರ್ನಾಟಕ ಘನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ಧರಾಮಯ್ಯ ಅವರು ದಿನಾಂಕ ೧೨.೯.೨೦೧೭ರಂದು ಬುಡಕಟ್ಟು ಅಧ್ಯಯನ ವಿಭಾಗದ ಹೊಸ ಕಟ್ಟಡಗಳನ್ನು ಉದ್ಘಾಟಿಸಿದರು. ಒಟ್ಟು ೨,೨೭೪ ಚದರ್ ಮೀಟರ್ (೧೧ ಹಳೆಯ ಕಟ್ಟಡ ೧,೪೨೦ ಚದರ್ ಮೀಟರ್ ಮತ್ತು ೩ ಹೊಸ ಕಟ್ಟಡ ೮೫೪ ಚದರ್ ಮೀಟರ್) ಕಟ್ಟಡಗಳಲ್ಲಿ ಬುಡಕಟ್ಟು ಅಧ್ಯಯನ ವಿಭಾಗವು ಕಾರ್ಯನಿರ್ವಹಿಸುತ್ತಲಿದೆ. ಹಳೆಯ ಕಟ್ಟಡಗಳು ಜೀರ್ಣಾವಸ್ಥೆಯಲ್ಲಿರುವುದರಿಂದ ಕಚೇರಿಯು ಹೊಸ ಕಟ್ಟಡಗಳಿಗೆ ೨೦೧೮–೨೦೧೯ರಲ್ಲಿ ಸ್ಥಳಾಂತರಿಸಲಾಗಿದೆ. ಹೊಸ ಆವರಣದಲ್ಲಿ ಗಿಡಗಳನ್ನು ನೆಡಲಾಗಿವೆ. ಕುಲಪತಿಗಳಾದ ಪ್ರೊ ಸ ಚಿ ರಮೇಶ ಅವರು ಹಳೆ ಕಟ್ಟಡಗಳ ಆವರಣವನ್ನು ಮಾದರಿ ಬುಡಕಟ್ಟು ಕಲಾಗ್ರಾಮ ಮತ್ತು ವಸ್ತು ಸಂಗ್ರಹಾಲಯವನ್ನಾಗಿಸಿ ಪ್ರವಾಸಿ ತಾಣವನ್ನಾಗಿಸುವ ಯೋಜನೆಯನ್ನು ಹೊಂದಿದ್ದು ಈ ಕುರಿತು ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

**ಬುಡಕಟ್ಟು ಗ್ರಂಥಾಲಯ:** ಬುಡಕಟ್ಟು ಅಧ್ಯಯನ ವಿಭಾಗದ ಗ್ರಂಥಾಲಯವು ೨೦೦೫ರಲ್ಲಿ ಆರಂಭಿಸಲಾಯಿತು. ೨೦೦೭ರಲ್ಲಿ ಇದನ್ನು ಬುಡಕಟ್ಟು ಗ್ರಂಥಾಲಯವಾಗಿ ಅಭಿವೃದ್ಧಿಗೊಳಿಸಲಾಯಿತು. ಯುಜಿಸಿ ಎಸ್ಎಪಿ, ಯುಜಿಸಿ ಎಂಆರ್‌ಪಿ, ಇತರೆ

ಯೋಜನೆಗಳ ಅಡಿಯಲ್ಲಿ ಖರೀದಿಸಿದ ಪುಸ್ತಕಗಳು, ದಾನಿಗಳು ನೀಡಿದ ಪುಸ್ತಕಗಳು ಇದರ ಬೆಳವಣಿಗೆಗೆ ಸಹಕಾರಿಯಾದವು. ವಿಭಾಗದ ಸದಸ್ಯರು, ವಿದ್ಯಾರ್ಥಿಗಳು ಇದರ ಬಳಕೆ ಮತ್ತು ಬೆಳವಣಿಗೆಗೆ ಸಹಕಾರಿಯಾಗಿದ್ದಾರೆ. ಈ ಗ್ರಂಥಾಯದಲ್ಲಿ ೩,೫೦೦ಕ್ಕೂ ಹೆಚ್ಚಿನ ಪುಸ್ತಕಗಳು ಅಧ್ಯಯನದ ಫಲಿತಗಳಾಗಿ ನೂರಾರು ಎಂ ಫಿಲ್, ಪಿಎಚ್ ಡಿ ಪ್ರಬಂಧಗಳು ಹಾಗೂ ಅಧ್ಯಯನ ವರದಿಗಳು ಮತ್ತು ಆಡಿಯೋ, ವಿಡಿಯೋ ಕ್ಯಾಸೆಟ್‌ಗಳು ವ್ಯವಸ್ಥಿತವಾಗಿ ದಾಖಲಾಗಿದ್ದು ಪರಾಮರ್ಶಕರಿಗೆ ಬುಡಕಟ್ಟು ಲೋಕವನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿವೆ. ಈ ಗ್ರಂಥಾಲಯವು ಬುಡಕಟ್ಟುಗಳ ಮಾಹಿತಿ ಕೇಂದ್ರವಾಗಿ ಪರಿವರ್ತನೆಯಾಗುತ್ತಿದೆ.

**ವಿಭಾಗದ ಚಟುವಟಿಕೆಗಳು:** ಬುಡಕಟ್ಟು ಅಧ್ಯಯನ ವಿಭಾಗದ ಅಧ್ಯಾಪಕರು ಆರಂಭದಲ್ಲಿ ಕರ್ನಾಟಕ ಬುಡಕಟ್ಟುಗಳ ಮಹಾಕಾವ್ಯಗಳ ಸಂಗ್ರಹಣೆ ಮತ್ತು ಸಂಪಾದನೆಯಲ್ಲಿ ತೊಡಗಿಸಿಕೊಂಡು ೧೨ ಬುಡಕಟ್ಟು ಮಹಾಕಾವ್ಯಗಳನ್ನು ಪ್ರಕಟಿಸಿದ್ದಾರೆ. ಆನಂತರ ಬುಡಕಟ್ಟುಗಳ ದೈವಾರಾಧನೆ, ಕುಲಕಸಬು, ಹುಟ್ಟು ಸಾವಿನ ನಡುವೆ, ಸ್ಥಿತ್ಯಂತರ, ಮರಗು ಭಾಷೆ, ಸಚಿತ್ರಕೋಶ, ಗೊಂಡವಾನಾ ಗೊಂಡಿ ಶಬ್ದಕೋಶ, ಎಂಬೀ ಇತ್ಯಾದಿ ಶಿರ್ಷಿಕೆಗಳಲ್ಲಿ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಬುಡಕಟ್ಟು ಅಧ್ಯಯನ ನಿಯತಕಾಲಿಕೆ ಮತ್ತು ವಿಚಾರ ಸಂಕಿರಣಗಳ ವರದಿಗಳು ಹಾಗೂ ಕರ್ನಾಟಕ ಮತ್ತು ಭಾರತ ಸರ್ಕಾರ ಪ್ರಾಯೋಜಿತ ಯೋಜನಾ ವರದಿಗಳು ನಾಡಿನ ಬುಡಕಟ್ಟು ಲೋಕವನ್ನು ಅನಾವರಣಗೊಳಿಸಲು ಸಹಕಾರಿಯಾಗಿವೆ.

ವಿಭಾಗದಲ್ಲಿ ಇದುವರೆಗೆ ೫ ಪಿಡಿಎಫ್, ೫೦ ಎಂ ಫಿಲ್ ಮತ್ತು ೧೪೯ ಪಿಎಚ್ ಡಿ ಸಂಶೋಧನಾರ್ಥಿಗಳಿಗೆ ಮಾರ್ಗದರ್ಶನ ನೀಡಲಾಗಿದೆ. ಪ್ರೊ ಹಿ ಚಿ ಬೋರಲಿಂಗಯ್ಯ ಅವರು ೧೭ ಪಿಎಚ್ ಡಿ, ೦೭ ಎಂ ಫಿಲ್; ಪ್ರೊ ಕೆ ಎಂ ಮೇತ್ರಿ ಅವರು ೪೫ ಪಿಎಚ್ ಡಿ, ೧೧ ಎಂ ಫಿಲ್, ೦೨ ಪಿಡಿಎಫ್; ಪ್ರೊ ಕೇಶವನ್ ಪ್ರಸಾದ್ ಕೆ ಅವರು ೧೧ ಪಿಎಚ್ ಡಿ, ೦೩ ಎಂ ಫಿಲ್; ಪ್ರೊ ಚಲುವರಾಜು ಅವರು ೧೮ ಪಿಎಚ್ ಡಿ, ೧೧ ಎಂ ಫಿಲ್, ೦೨ ಪಿಡಿಎಫ್; ಪ್ರೊ ಗಂಗಾಧರ ದೈವಜ್ಞ ಅವರು ೨೩ ಪಿಎಚ್ ಡಿ, ೦೯ ಎಂ ಫಿಲ್, ೦೧ ಪಿಡಿಎಫ್; ಪ್ರೊ ಎ ಎಸ್ ಪ್ರಭಾಕರ ಅವರು ೧೭ ಪಿಎಚ್ ಡಿ, ೦೮ ಎಂ ಫಿಲ್ ಸಂಶೋಧನಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ವಿಭಾಗದ ಸಂಶೋಧನಾರ್ಥಿಗಳಿಗೆ ಪ್ರೊ ಚಂದ್ರಶೇಖರ ಕಂಬಾರ (೧), ಪ್ರೊ ಜೋಗನ್ ಶಂಕರ್ (೧), ಪ್ರೊ ರಹಮತ್ ತರೀಕರೆರೆ (೧), ಪ್ರೊ ಮಂಜುನಾಥ ಬೇವಿನಕಟ್ಟಿ (೧), ಪ್ರೊ ಅಶೋಕಕುಮಾರ ರಂಜೇರೆ (೧), ಪ್ರೊ ಮೊಗಳ್ಳಿ ಗಣೇಶ (೧), ಡಾ ಹರಿಶ್ಚಂದ್ರ ದಿಗ್ಸಂಗೀಕರ (೧), ಪ್ರೊ ಸಿ ಟಿ ಗುರುಪ್ರಸಾದ್ (೨) ಅವರುಗಳು ಬಾಹ್ಯ ಮಾರ್ಗದರ್ಶನ ನೀಡಿದ್ದಾರೆ. ಪ್ರಸ್ತುತ ಡಾ ಜಿ ಬಿ ಬೋರಯ್ಯ (೨), ಡಾ ಗಿರೀಶ ಕೆ (೪), ಡಾ ಸಿ ಜಿ ಲಕ್ಷ್ಮೀಪತಿ (೩) ಅವರು ಬಾಹ್ಯ ಮಾರ್ಗದರ್ಶಕರಾಗಿ ಪ್ರೊ ಸಿದ್ದಗಂಗಮ್ಮ, ಡಾ ಪೂರ್ವಾಚಾರ್ ಎಂ, ಡಾ ಕೃಪಾಲಿನಿ ಹೆಚ್ ಎಸ್, ಡಾ ಎಸ್ ವೈ ಹೊನ್ನೂಂಗರ, ಡಾ ಕುಮಾರ, ಪ್ರೊ ಬಿ ರಮೇಶ, ಪ್ರೊ ಚಂದ್ರಶೇಖರ, ಡಾ ಹಾರಾಳ ಬುಳ್ಳಪ್ಪ ಮತ್ತು ಡಾ ಗುರುನಾಥ ಬಡಿಗೇರ ಅವರುಗಳು ಬಾಹ್ಯ ಸಹಮಾರ್ಗದರ್ಶಕರಾಗಿ ಸಹಕರಿಸುತ್ತಲಿದ್ದಾರೆ.

ಈಗಾಗಲೇ ನೂರಾರು ಸಂಶೋಧನಾರ್ಥಿಗಳು ಬುಡಕಟ್ಟು ಸಮುದಾಯಗಳ ವಿಷಯಗಳನ್ನು ಕುರಿತು ಅಂತರ್ಶಿಸ್ತೀಯ ವಿಧಾನದಲ್ಲಿ ಎಂ ಫಿಲ್, ಪಿಎಚ್ ಡಿ ಮತ್ತು ಪಿಡಿಎಫ್ ಪದವಿಗಳಿಗಾಗಿ ಶೋಧಕಾರ್ಯ ನಡೆಸಿ ವಿವಿಧ ಸಾರ್ವಜನಿಕ ವಲಯಗಳಲ್ಲಿ ಸೇವೆಸಲ್ಲಿಸುತ್ತಲಿದ್ದಾರೆ. ಪ್ರಸ್ತುತ ೧೮ (೫ ಆಂತರಿಕ, ೧೩ ಬಾಹ್ಯ) ಮಾರ್ಗದರ್ಶಕರು ೪೧ ಅಧ್ಯಯನಶೀಲ ಪಿಎಚ್ ಡಿ ಸಂಶೋಧನಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಲಿದ್ದಾರೆ.

ಸಂಸ್ಥಾಪಕ ಕುಲಪತಿ ಪ್ರೊ ಚಂದ್ರಶೇಖರ ಕಂಬಾರ ಅವರ ಮಾರ್ಗದರ್ಶನದಲ್ಲಿ ಪ್ರೊ ಹಿ ಚಿ ಬೋರಲಿಂಗಯ್ಯ ಅವರು ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಪಿಎಚ್ ಡಿ ಅಧ್ಯಯನ ಪೂರೈಸಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿರುವುದು ಮತ್ತು ಪ್ರೊ ಹಿ ಚಿ ಬೋರಲಿಂಗಯ್ಯ ಅವರ ಪ್ರಥಮ ಪಿಎಚ್ ಡಿ ಮಾರ್ಗದರ್ಶನದಲ್ಲಿ ಪ್ರೊ ಸ ಚಿ ರಮೇಶ ಅವರು ಪಿಎಚ್ ಡಿ ಅಧ್ಯಯನ ಪೂರೈಸಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿರುವುದು ವಿಶೇಷವಾಗಿರುವುದು. ಇವರುಗಳ ಸಂಶೋಧನೆಗಳು ಮತ್ತು ಸೇವಾಕಾರ್ಯಗಳು ಬುಡಕಟ್ಟು ಅಧ್ಯಯನ ವಿಭಾಗದ ಬೆಳವಣಿಗೆಗೆ ಮತ್ತು ಬುಡಕಟ್ಟು ಸಮುದಾಯಗಳಿಗೆ ಸಹಕಾರಿಯಾಗಿವೆ.

ವಿಭಾಗದ ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ, ಪಿಎಚ್ ಡಿ ಸಮಿತಿ, ಬಾಹ್ಯ ಮಾರ್ಗದರ್ಶಕರು, ಸಹಮಾರ್ಗದರ್ಶಕರು, ಯೋಜನೆಗಳ ಸಲಹಾ ಸಮಿತಿಗಳಲ್ಲಿಯ ನೂರಾರು ಚಿಂತಕರ ಸಲಹೆ ಸೂಚನೆಗಳು ಬುಡಕಟ್ಟು ಅಧ್ಯಯನ ವಿಭಾಗದ ಬೆಳವಣಿಗೆಗೆ ಸಹಕಾರಿಯಾಗಿವೆ.

ಬುಡಕಟ್ಟು ಅಧ್ಯಯನ ವಿಭಾಗ ನಡೆದುಬಂದ ದಾರಿಯ ಕುರಿತು ಸಿಂಹಾವಲೋಕನ ಮಾಡಲು ಮತ್ತು ನಡೆಯಬೇಕಾದ ದಾರಿಯ ಕುರಿತು ಅಭಿಪ್ರಾಯ ಸಂಗ್ರಹಿಸಲು ಬೆಳ್ಳಿಹಬ್ಬದ ಈ ಸಂದರ್ಭದಲ್ಲಿ ಕೊವಿಡ - ೧೯ರ ಕಾರಣ ಈ ವೆಬಿನಾರ್ ಆಯೋಜಿಸಲಾಗಿದೆ. ವಿಭಾಗದ ಬೆಳವಣಿಗೆಗೆ ಎಲ್ಲರ ಅಭಿಪ್ರಾಯ ಕೋರಲಾಗಿದೆ. ಈ ಕಾರ್ಯಕ್ರಮಕ್ಕೆ ಮತ್ತೊಮ್ಮೆ ಎಲ್ಲರಿಗೂ ಸ್ವಾಗತ. ಈ ಕಾರ್ಯಕ್ರಮಕ್ಕೆ ಜೂಮ್ ತಂತ್ರಾಂಶ ವೇದಿಕೆ ನೀಡಿ ಸಹಕರಿಸಿದ **ಡಾ ಸುಭಾಶರೆಡ್ಡಿ,** ಗ್ರಂಥಪಾಲಕರು, ಪಿಇಎಸ್ ವಿಶ್ವವಿದ್ಯಾಲಯ, ಬೆಂಗಳೂರು ಅವರಿಗೆ ಕೃತಜ್ಞತೆಗಳು ಮತ್ತು ಈ ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು".

ಬುಡಕಟ್ಟು ಅಧ್ಯಯನ ವಿಭಾಗದ ಬೆಳ್ಳಿ ಹಬ್ಬಾಚರಣೆಯ ಕಾರ್ಯಕ್ರಮವನ್ನು ವಿಭಾಗದ ಸಂಸ್ಥಾಪಕ ಮುಖ್ಯಸ್ಥರು ಹಾಗೂ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾಗಿದ್ದ **ಪ್ರೊ ಹಿ ಚಿ ಬೋರಲಿಂಗಯ್ಯನವರು** ಆನ್‌ಲೈನ್‌ನಲ್ಲಿ ಉದ್ಘಾಟಿಸಿ ಹೀಗೆ ಮಾತನಾಡಿದರು. "ಬುಡಕಟ್ಟು ಅಧ್ಯಯನ ವಿಭಾಗವು ಪ್ರೊ ಚಂದ್ರಶೇಖರ ಕಂಬಾರ, ಸಂಸ್ಥಾಪಕ ಕುಲಪತಿಗಳ ಕನಸಾಗಿತ್ತು. ಅವರ ಕನಸಿನಂತೆ ಬುಡಕಟ್ಟು ಗ್ರಾಮದ ಮಾದರಿಯಲ್ಲಿ ಬುಡಕಟ್ಟು ಅಧ್ಯಯನ ವಿಭಾಗದ ಕಟ್ಟಡಗಳು ಮೈದಳೆದವು. ಅವರು ನಾಡಿನ ಬುಡಕಟ್ಟು ಜಾನಪದದ ಸೊಗಡನ್ನು ಕನ್ನಡ ವಿಶ್ವವಿದ್ಯಾಲಯದ ಮೂಲಕ ಪ್ರಸಾರ ಮಾಡುವ ಉದ್ದೇಶವನ್ನು ಹೊಂದಿದದವರಾಗಿದ್ದರು. ಆ ಕಾರಣಕ್ಕಾಗಿಯೇ ಕರ್ನಾಟಕ ಜನಪದ ಕಲೆಗಳ ಕೋಶ, ಬುಡಕಟ್ಟು ಮಹಾಕಾವ್ಯಗಳ ಸಂಗ್ರಹಣೆ ಮತ್ತು ಸಂಪಾದನೆಯ ಕಾರ್ಯ ವಿಭಾಗ ಆರಂಭದಲ್ಲಿ ಮಾಡಲಾಯಿತು. ಈ ಕಾರ್ಯವು ವಿಭಾಗಕ್ಕೆ ಗೌರವವನ್ನು ತಂದು ಕೊಟ್ಟಿತ್ತು. ಈ ಎಲ್ಲ ಕಾರ್ಯಗಳಿಗೆ ಕುಲಸಚಿವರಾಗಿದ್ದ ಪ್ರೊ ಕೆ ವಿ ನಾರಾಯಣ ಅವರ ಪೂರ್ಣ ಬೆಂಬಲವಿತ್ತು. ಕಾವ್ಯಗಳ ಸಂಗ್ರಹಣೆ ಮತ್ತು ಸಂಪಾದನ ಕಾರ್ಯದಲ್ಲಿ ಭಾಗಿಯಾದ ಪ್ರೊ ಚಲುವರಾಜು ಅವರ ಕಾರ್ಯವನ್ನು ಮುಕ್ತಕಂಠದಿಂದ ಕೊಂಡಾಡಿದರು. ಆನಂತರದ ಅವಧಿಯಲ್ಲಿ ಬುಡಕಟ್ಟುಗಳ ಕುರಿತು ಬುಡಕಟ್ಟು ದೈವಾರಾಧನೆ, ಕುಲಕಸುಬು, ಹುಟ್ಟು ಸಾವಿನ ನಡುವೆ, ಸ್ಥಿತ್ಯಂತರ, ಸಚಿತ್ರಕೋಶ ಇತ್ಯಾದಿ ಕೃತಿಗಳು ವಿಭಾಗದ ಕಾರ್ಯವನ್ನು ವಿಸ್ತರಿಸಿದವು. ಅಧ್ಯಾಪಕರ ಕಾರ್ಯಕ್ಷೇತ್ರವು ವಿಸ್ತಾರಗೊಂಡಿತು. ಕರ್ನಾಟಕ ಸರ್ಕಾರದ ಬುಡಕಟ್ಟು ಸಂಶೋಧನಾ ಸಂಸ್ಥೆ, ಶ್ರೀ ಡಿ ದೇವರಾಜ ಅರಸು ಸಂಶೋಧನಾ ಸಂಸ್ಥೆ,

ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಾಯೋಜಿತ ಯೋಜನೆಗಳು ಭಾರತ ಸರ್ಕಾರದ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಪ್ರಾಯೋಜಿತ ವಿಶೇಷ ನೆರವಿನ ಯೋಜನೆ, ಡಿಜಿಟಲ್ ಹಂಪಿ ಯೋಜನೆ, ಐಸಿಎಸ್ಎಸ್ಆರ್ ಮತ್ತು ಭಾರತೀಯ



ಭಾಷಾ ಸಂಸ್ಥಾನ ಪ್ರಾಯೋಜಿತ ಯೋಜನೆಗಳ, ವಿಭಾಗದ ಎಂ ಫಿಲ್, ಪಿಎಚ್ ಡಿ, ಪಿಡಿಎಫ್ ಅಧ್ಯಯನಗಳು ಬುಡಕಟ್ಟು ಅಧ್ಯಯನವನ್ನು ವಿಸ್ತಾರಗೊಳಿಸಿವೆ. ಅಧ್ಯಯನಗಳ ಫಲಿತಗಳಿಗೆ ಮತ್ತು ಅಧ್ಯಯನಕಾರರಿಗೆ ಗೌರವ ದಕ್ಕುವಂತಾಗಬೇಕು. ಬೆಳ್ಳಿಹಬ್ಬ ಆತ್ಮಾವಲೋಕನದ ಸಮಯ. ಮುಂದಿನ ದಿನಗಳಲ್ಲಿ ಅಲೆಮಾರಿ, ಆದಿವಾಸಿ, ಸೂಕ್ಷ್ಮ ಬುಡಕಟ್ಟುಗಳ ಅಭಿವೃದ್ಧಿಪರ ಶೋಧಗಳು ಹೆಚ್ಚಾಗಬೇಕು. ಐಸೆಕ್ ಅಂತಹ ಅಧ್ಯಯನ ಕೇಂದ್ರವಾಗಿ ಬುಡಕಟ್ಟು ಅಧ್ಯಯನ ವಿಭಾಗ ರೂಪುಗೊಳ್ಳಬೇಕು. ಇದರಲ್ಲಿ ಬಹುಶಿಸ್ತೀಯ ಅಧ್ಯಯನಗಳು, ವಿಶ್ವವ್ಯಾಪಿ ಬಹುಶಿಸ್ತೀಯ ಅಧ್ಯಯನ ಕೇಂದ್ರಗಳೊಂದಿಗೆ ಸೇರಿ ಮುಂದುವರಿಸಬೇಕು. ಬುಡಕಟ್ಟುಗಳ ಪಾರಂಪರಿಕ ಮೌಲ್ಯಗಳ ರಕ್ಷಣೆ ಮತ್ತು ಅವರ ಅಭಿವೃದ್ಧಿ ಅಂತಹ ಸುವರ್ಣ ಮಾರ್ಗವನ್ನು ಅಧ್ಯಯನಗಳಲ್ಲಿ ಅನುಸರಿಸಬೇಕು. ಗಿರಿಸೀಮೆಯನ್ನು ಒಂದು ಪ್ರವಾಸಿ ತಾಣವಾಗುವಂತೆ ಅಭಿವೃದ್ಧಿಪಡಿಸಬೇಕು. ಕೊವಿಡ್ - ೧೯ರ ಈ ಸಂಕ್ರಮಣ ಅವಸ್ಥೆಯಲ್ಲಿಯೂ ನೆನಪಿನಿಂದ ವಿಭಾಗದ ಬೆಳ್ಳಿಹಬ್ಬಾಚರಣೆಯನ್ನು ವೆಬಿನಾರ್ ಮೂಲಕ ಸಂಘಟಿಸಿದ ಕುಲಪತಿ ಪ್ರೊ ಸ ಚಿ ರಮೇಶ ಅವರಿಗೆ, ಕುಲಸಚಿವ ಪ್ರೊ ಎ ಸುಬ್ಬಣ್ಣ ರೈ ಅವರಿಗೆ, ವಿಭಾಗದ ಮುಖ್ಯಸ್ಥ ಪ್ರೊ ಕೆ ಎಂ ಮೇತ್ರಿ ಅವರಿಗೆ ಮತ್ತು ಎಲ್ಲ ಅಧ್ಯಾಪಕರಿಗೆ ಹಾಗೂ ಈ ಕಾರ್ಯಕ್ರಮದಲ್ಲಿ ಭಾಗಿಯಾದ ಎಲ್ಲರಿಗೂ ಶುಭ ಹಾರೈಸಿದರು".



***ಮುಖ್ಯ ಅತಿಥಿಗಳ*** ನುಡಿಗಳನ್ನಾಡಿದ **ಡಾ ಕೆ ಕೆ ಮಾಧವ ಪೆರಾಜೆ,** ಸಂಸ್ಥಾಪಕ ಉಪನ್ಯಾಸಕರು, ಬುಡಕಟ್ಟು ಅಧ್ಯಯನ ವಿಭಾಗ, ಡೀನ್, ವಿಜ್ಞಾನ ನಿಕಾಯ, ಪ್ರಾಧ್ಯಾಪಕರು, ದ್ರಾವಿಡ ಅಧ್ಯಯನ ವಿಭಾಗ, ಇವರು ತಮ್ಮ ಬುಡಕಟ್ಟು ಅಧ್ಯಯನ ವಿಭಾಗದ ಆರಂಭಿಕ ದಿನಗಳನ್ನು ನೆನೆಯುತ್ತ ಬುಡಕಟ್ಟು ಸಮುದಾಯಗಳ ಮೂಲವನ್ನು ವೈಜ್ಞಾನಿಕವಾಗಿ ಅರಿಯಬೇಕಾಗಿದೆ. ದಕ್ಷಿಣ ಆಫ್ರಿಕಾದ ಮೂಲಿಗರಾದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ ಜಾರ್ವಾ ಆದಿವಾಸಿಗಳು ನಮ್ಮೆಲ್ಲರ ಮೂಲಿಗರು ಎಂಬುದನ್ನು ಜನಾಂಗೀಯ ಮತ್ತು ವಂಶವಾಹಿನಿ ತಜ್ಞರು ಡಿಎನ್ಎ ಪರೀಕ್ಷೆಯ ಹಿನ್ನೆಲೆಯಲ್ಲಿ ಸಾಬೀತುಪಡಿಸಿದ್ದಾರೆ. ಭಾರತೀಯರನ್ನು ಬ್ರಿಟಿಷ್ ಅಧ್ಯಯನಕಾರರು ಆದಿವಾಸಿಗಳು ಎಂದು ಕರೆದಿದ್ದಾರೆ. ಅವರ ದೃಷ್ಠಿಯಲ್ಲಿ ಆದುವಾಸಿಗಳು ಎಂದರೆ ಅನಾಗರಿಕರು ಎಂದರ್ಥ. ಆದುದರಿಂದ ಭಾರತ ನಾಗರಿಕತೆಯ ತೊಟ್ಟಿಲು ಎಂದು ಹೇಳಿದ್ದಾರೆ. ಭಾರತಿಯರು ಸಮುದಾಯಗಳನ್ನು ಜಾತಿ ಎಂದು ಗುರುತಿಸುತ್ತಾರೆ. ಹೀಗಾಗಿ ಬುಡಕಟ್ಟಿನ ಮರು ವ್ಯಾಖ್ಯಾನ ಮಾಡಬೇಕಾಗಿದೆ. ಯೋಜನೆ ಹಾಗೂ ಅಭಿವೃದ್ಧಿಗಾಗಿ ಬುಡಕಟ್ಟುಗಳ ಅಧ್ಯಯನ ವ್ಯಾಪಕವಾಗಿ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಶಾರೀರಿಕ ಮಾನವಶಾಸ್ತ್ರ, ಸಮಾಜಶಾಸ್ತ್ರ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ, ಭಾಷಾಶಾಸ್ತ್ರದಂತಹ ಶಿಸ್ತುಗಳನ್ನು ಒಳಪಡಿಸಿಕೊಂಡು ಬುಡಕಟ್ಟು ಅಧ್ಯಯನ ಬೆಳೆಯಬೇಕಾಗಿದೆ ಎಂದರು.



**ಡಾ ಸಿ ಮಹದೇವ,** ಡೀನ್**,** ಸಮಾಜ ವಿಜ್ಞಾನಗಳ ನಿಕಾಯ ಮತ್ತು ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಇವರು ಕನ್ನಡ ವಿಶ್ವವಿದ್ಯಾಲಯದ ಆರಂಭಿಕ ಚಟುವಟಿಕೆಗಳನ್ನು ನೆನೆಯುತ್ತ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ೨೫ ವರ್ಷ ತುಂಬಿರುವುದು ಸಂತಸ ತಂದಿದೆ. ನಮ್ಮ ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಬೆಳ್ಳಿಹಬ್ಬಾಚರಣೆಗೆ ಇದು ಮಾದರಿ ಮತ್ತು ಅಡಿಗಲ್ಲಾಗಿದೆ. ಕರ್ನಾಟಕದ ಹಲವಾರು ಪುರಾತತ್ವ ಉತ್ಖನನಗಳಲ್ಲಿ ಪ್ರೋಟೊ–ಆಸ್ಟ್ರಲಾಯಿಡ್ ಬುಡಕಟ್ಟುಗಳ ಅವಶೇಷಗಳು ಪತ್ತೆಯಾಗಿವೆ. ಬೃಹತ್ ಶಿಲಾ ಸಂಸ್ಕೃತಿಯ ಕಲ್ಗೋರಿಗಳು, ಗುಹಾ ವರ್ಣಚಿತ್ರಗಳು ಆದಿಮಾನವನ ಕುರುಹುಗಳಾಗಿ ವಿಶ್ವದಾದ್ಯಂತ ಕಾಣಸಿಗುತ್ತವೆ. ಈ ವಿಭಾಗವು ಸಮಾಜ ವಿಜ್ಞಾನ ನಿಕಾಯದ ಎಲ್ಲ ವಿಭಾಗಗಳ ಜೊತೆಗೂಡಿ ಗಟ್ಟಿಗೊಳ್ಳಬೇಕು. ಬುಡಕಟ್ಟಿನ ವಿಭಿನ್ನ ನೆಲೆಗಳನ್ನು ವಿಭಿನ್ನ ಶಾಸ್ತ್ರಗಳಲ್ಲಿ ಅಧ್ಯಯನಗೊಳ್ಳುತ್ತಲಿವೆ. ಆ ಎಲ್ಲ ಶಿಸ್ತುಗಳಿಗೆ ಬುಡಕಟ್ಟು ಅಧ್ಯಯನ ಮೂಲವಾಗಬೇಕು ಎಂದರು.



ಕುಲಸಚಿವರಾದ **ಪ್ರೊ ಸುಬ್ಬಣ್ಣ ರೈ** ಅವರು ಉಪಸ್ಥಿತಿ ನುಡಿಗಳನ್ನಾಡಿದರು. ಅವರು ಬುಡಕಟ್ಟು ಅಧ್ಯಯನ ವಿಭಾಗದ ಬೆಳ್ಳಿಹಬ್ಬಾಚರಣೆ ನಮ್ಮ ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಬೆಳ್ಳಿಹಬ್ಬಾಚರಣೆಗೆ ಪ್ರೇರಣೆಯಾಗಿದೆ. ಇದು ವಿಭಾಗಗಳು ನಡೆದು ಬಂದ ದಾರಿ ಮತ್ತು ನಡೆಯಬೇಕಾದ ದಾರಿ ಕುರಿತು ಚಿಂತಿಸಲು, ಯೋಜಿಸಲು ನೆರವಾಗುತ್ತದೆ. ಆರಂಭದಲ್ಲಿ ಭಾವನಾತ್ಮಕ ಅಧ್ಯಯನಗಳು ಜರುಗಿವೆ, ಇನ್ನು ಮುಂದೆ ವೈಚಾರಿಕ ನೆಲೆಯಲ್ಲಿ ಅಧ್ಯಯನಗಳು ಸಾಗಬೇಕು ಮತ್ತು ಇದರಲ್ಲಿ ಯುವ ಸಂಶೋಧಕರು ಹೆಚ್ಚಾಗಿ ಪಾಲ್ಗೊಳ್ಳಬೇಕು ಎಂದರು.




ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ ಚಲುವರಾಜು** ಅವರು ಅಂತರ್ಜಾಲಕ್ಕೆ ಬುಡಕಟ್ಟು ಅಧ್ಯಯನ ವಿಭಾಗ ತೆರೆದುಕೊಳ್ಳುತ್ತಿರುವುದು ಸಂತಸ ತಂದಿದೆ. ಇದುವರೆಗಿನ ನಮ್ಮ ವಿಭಾಗದ ಯೋಜನೆಗಳು ಪ್ರಕಟವಾಗಬೇಕು, ಮುದ್ರಿತವಾದವುಗಳನ್ನು ಮರುಮುದ್ರಣ ವಾಗಬೇಕು ಮತ್ತು ಅನುವಾದವಾಗಬೇಕು, ಸಂಗ್ರಹಿಸಿದ ಆಡಿಯೋ – ವಿಡಿಯೋಗಳು ಜನರ ಕೈಗೆ ತಲುಪುವಂತೆ ಮಾಡಬೇಕು. ಬುಡಕಟ್ಟು ನೆಲೆಗಳಲ್ಲಿ ವಿಸ್ತರಣಾ ಕೇಂದ್ರಗಳು ಆರಂಭಗೊಳ್ಳಬೇಕು ಮತ್ತು ಸಹಭಾಗಿತ್ವ ವಿಧಾನದಲ್ಲಿ ಅನ್ವಯಿಕ ಅಧ್ಯಯನಗಳು ಆಗಬೇಕು. ವಿಭಿನ್ನ ಜ್ಞಾನ ಶಿಸ್ತುಗಳ ತಜ್ಞರನ್ನು ಒಳಗೊಂಡು ಬುಡಕಟ್ಟು ವಿಶ್ವಕೋಶಗಳನ್ನು ಸಿದ್ಧಪಡಿಸಿ ಪ್ರಕಟಿಸಬೇಕು ಎಂದರು.



ಬುಡಕಟ್ಟು ಅಧ್ಯಯನ ವಿಭಾಗದ ಸಂಸ್ಥಾಪಕ ಸಂಶೋಧನಾ ಸಹಾಯಕರು ಹಾಗೂ ಪ್ರಸ್ತುತ ಪ್ರಾಧ್ಯಾಪಕರಾದ **ಡಾ ಗಂಗಾಧರ ದೈವಜ್ಞ** ಅವರು ಆದಿವಾಸಿಗಳನ್ನು ಅರಣ್ಯದಿಂದ ಅಂಚಿಗೆ ತಳ್ಳುವ ಅನುಭವ ನಮ್ಮ ವಿಭಾಗಕ್ಕೆ ಆಗುತ್ತಿದೆ. ಹಳೆಯ ಕಟ್ಟಡದಲ್ಲಿ ಆದಿವಾಸಿಯ ಸೊಗಡು ಕಾಣಸಿಗುತ್ತಿತ್ತು, ಹೊಸ ಕಟ್ಟಡಗಳಲ್ಲಿ ಅದು ಸಾಧ್ಯವಿಲ್ಲ. ಹೀಗಾಗಿ ಹಳೆಯ ಕಟ್ಟಡಗಳು ಜೀರ್ಣೋದ್ಧಾರವಾಗಿ ಬುಡಕಟ್ಟು ವಸ್ತು ಸಂಗ್ರಹಾಲಯವಾಗಬೇಕು. ದಕ್ಷಿಣ ಭಾರತ ಬುಡಕಟ್ಟುಗಳ ಕೋಶವಾಗಬೇಕು. ಅದಕ್ಕೆ ಅಗತ್ಯ ಅನುದಾನವನ್ನು ವಿಶ್ವವಿದ್ಯಾಲಯ ಒದಗಿಸಬೇಕು ಎಂದರು.



ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ ಎ ಎಸ್ ಪ್ರಭಾಕರ** ಅವರು ಬೆಳ್ಳಿಹಬ್ಬದ ಸಿಂಹಾವಲೋಕನದ ಅಧ್ಯಾಪಕರ ನುಡಿಗಳನ್ನಾಡಿದರು. ಅವರು ತಮ್ಮನ್ನು ಬುಡಕಟ್ಟು ಶಿಸ್ತಿಗೆ ಒಳಪಡಿಸುವಂತೆ ಈ ವಿಭಾಗ ಮಾಡಿತು. ಬುಡಕಟ್ಟು ಅಧ್ಯಯನ ಒಂದು ಶಾಸ್ತ್ರ ಶಿಸ್ತು ಅಲ್ಲದೇ ಇರುವುದರಿಂದ ಆರಂಭದಲ್ಲಿ ಬುಡಕಟ್ಟುಗಳ ಆಕರಗಳ ಸಂಗ್ರಹ, ಸಂಪಾದನೆ, ಅವುಗಳ ವಿಶ್ಲೇಷಣೆ ಮತ್ತು ಸಂಶೋಧನೆ ಹಾಗೂ ಹೊಸ ಸಂಶೋಧನ ವಿಧಾನಗಳ ಹುಡುಕಾಟದ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಬುಡಕಟ್ಟು ಅಧ್ಯಯನ ನಿಯತಕಾಲಿಕೆ ಈ ವಿಚಾರಗಳ ಮುಖವಾಣಿಯಾಗಿತ್ತು. ಇದನ್ನು ಮತ್ತೇ ಮುಂದುವರಿಸುವ ಮತ್ತು ಸಾಂಘಿಕವಾಗಿ ವಿಭಾಗ ಕಟ್ಟುವಲ್ಲಿ ಎಲ್ಲರೂ ಕೈಜೋಡಿಸಬೇಕಾಗಿದೆ ಎಂದರು.



ಪ್ರತಿಕ್ರಿಯೆಯಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಅರಿಝೋನಾ ವಿಶ್ವವಿದ್ಯಾಲಯದ ಸಾಂಸ್ಕೃತಿಕ ಮಾನವಶಾಸ್ತ್ರ ವಿಭಾಗದಲ್ಲಿ ನಲ್ಲಾಮಲೈಯ ಚೆಂಚು ಬುಡಕಟ್ಟಿನ ಕುರಿತು ಪಿಎಚ್ ಡಿ ಅಧ್ಯಯನ ಮಾಡುತ್ತಿರುವ ಕನ್ನಡ ವಿಶ್ವವಿದ್ಯಾಲಯದ ಸಂಸ್ಥಾಪಕ ಮುಖ್ಯ ಗ್ರಂಥಪಾಲಕರಾಗಿದ್ದ ಪ್ರೊ ಜಿಂಕಾ ರಾಮಮೂರ್ತಿ ಅವರ ಹಿರಿಯ ಮಗಳಾದ ಶ್ರೀಮತಿ ಜಿಂಕಾ ಮಾಳವಿಕಾ (+13367407829, jrmalavika@gmail.com) ಅವರು ವೆಬಿನಾರಿನಲ್ಲಿ ಹೀಗೆ ಮಾತನಾಡಿದರು. ಬುಡಕಟ್ಟು ಸಂಸ್ಕೃತಿ ನಮ್ಮೆಲ್ಲರ ಸಂಸ್ಕೃತಿಯ ಮೂಲವಾಗಿರುವುದು. ಅದನ್ನು ಉಳಿಸಲು ಅವರ ಮೌಲ್ಯಗಳನ್ನು ನಾವು ಎತ್ತಿ ಹಿಡಿಯಬೇಕು. ಅಭಿವೃದ್ಧಿಯ ಪರಿಕಲ್ಪನೆಯನ್ನು ಬುಡಕಟ್ಟು ನೆಲೆಯಿಂದ ವಿವೇಚಿಸಬೇಕು. ಪಾಶ್ಚಾತರು ಭಾರತೀಯ ಬುಡಕಟ್ಟು ಪರಂಪರೆ, ಪಾರಂಪರಿಕ ಜ್ಞಾನ ಅರಿಯಲು ಉತ್ಸುಕರಾಗಿದ್ದಾರೆ. ಅದಕ್ಕಾಗಿ ವೆಬಿನಾರ್ ಗಳು ಸಹಕಾರಿಯಾಗಲಿವೆ. ಭಾರತೀಯ ಬುಡಕಟ್ಟು ಲೋಕವನ್ನು ಈ ಮೂಲಕ ಅನಾವರಣಗೊಳಿಸಬಹುದಾಗಿದೆ. ವಸ್ತು ಸಂಗ್ರಹಾಲಯಗಳು ಹೊಸ ಪೀಳಿಗೆಗೆ ಗತಪರಂಪರೆಯನ್ನು ಅಧ್ಯಯನ ಮಾಡಲು ಕೊಂಡಿಯಾಗಿ ಸಹಕಾರಿಯಾಗುತ್ತವೆ. ಅವುಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.



ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ **ಪ್ರೊ ಸ ಚಿ ರಮೇಶ** ಅವರು ಅಧ್ಯಕ್ಷೀಯ ನುಡಿಗಳನ್ನಾಡುತ್ತಾ ಬುಡಕಟ್ಟು ಅಧ್ಯಯನ ವಿಭಾಗದ ಬೆಳ್ಳಿಹಬ್ಬವನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಪ್ರಥಮವಾಗಿ ವೆಬಿನಾರ್ ಮೂಲಕ ಆಚರಿಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಇದು ಎಲ್ಲಾ ವಿಭಾಗಗಳಿಗೆ ಮಾದರಿಯಾಗಿರುವುದು. ವೆಬಿನಾರಿನಲ್ಲಿ






ಮಾತನಾಡಿದ ಎಲ್ಲರ ಮಾತುಗಳಿಗೆ ಗೌರವಿಸುತ್ತ ಅವರು ಗಿರಿಸೀಮೆ ಪ್ರೊ ಚಂದ್ರಶೇಖರ ಕಂಬಾರರ ಮತ್ತು ಪ್ರೊ ಹಿ ಚಿ ಬೋರಲಿಂಗಯ್ಯ ಅವರ ಕನಸು. ಬುಡಕಟ್ಟು ಅಧ್ಯಯನ ವಿಭಾಗದ ಗಿರಿಸೀಮೆಯ ಪಾರಂಪರಿಕವಾದ ಬುಡಕಟ್ಟು ಮಾದರಿಯ ಮನೆಗಳನ್ನು ಉಳಿಸಿಕೊಳ್ಳಲು ಮತ್ತು ಕ್ರೀಯಾಶೀಲಗೊಳಿಸಲು ಯೋಜನೆಯನ್ನು ಸಿದ್ದಪಡಿಸಿ ವಾರ್ತಾ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಸಿ ಟಿ ರವಿ ಅವರಿಗೆ ಸಲ್ಲಿಸಲಾಗಿದೆ. ಕರ್ನಾಟಕ ಸರ್ಕಾರದಿಂದ ಧನಾತ್ಮಕವಾದ ಪ್ರತಿಕ್ರಿಯೆ ಲಭ್ಯವಾಗಿದೆ. ಮಂಗಳೂರಿನ ಪಿಲಿಕುಳ ನಿಸರ್ಗಧಾಮ ಮಾದರಿಯಲ್ಲಿ ಬುಡಕಟ್ಟು ವಸ್ತು ಸಂಗ್ರಹಾಲಯವನ್ನು ಅಭಿವೃದ್ಧಿಪಡಿಸಲಾಗುವುದು. ಎಲೆಮರೆಯ ಕಾಯಿಯಂತೆ ಇದ್ದ ಬುರ್ರಕಥಾ ಈರಮ್ಮ, ಸುಕ್ರಿ ಬೊಮ್ಮಗೌಡ, ಸಿರಿ ಅಜ್ಜಿ ಮುಂತಾದ ಮಹಾನ್ ಕಲಾವಿದರನ್ನು ಗುರುತಿಸಿದ ಹೆಗ್ಗಳಿಕೆ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲುತ್ತದೆ. ನಾಡಿನ ಎಲ್ಲ ಬುಡಕಟ್ಟುಗಳ ಸಮಸ್ಯೆಗಳಿಗೆ ಬುಡಕಟ್ಟು ಅಧ್ಯಯನ ವಿಭಾಗವು ಅವುಗಳನ್ನು ಪರಿಹರಿಸುವಂತೆ ಸಹಕಾರಿಯಾಗಿ ಬೆಳೆಯಬೇಕು ಎಂದರು.



ಕಾರ್ಯಕ್ರಮದ ನಿರೂಪಣೆಯನ್ನು ವೆಬಿನಾರ್ ತಾಂತ್ರಿಕ ಆಯೋಜಕರು ಹಾಗೂ ಸಹಾಯಕ ಗ್ರಂಥಪಾಲಕರಾದ ಶಂಕರಗೌಡ ಎಸ್ ಜಿ ಅವರು ಮಾಡಿದರು. ಕಾರ್ಯಕ್ರಮಕ್ಕೆ ಜೂಮ್ ತಂತ್ರಾಂಶ ವೇದಿಕೆ ನೀಡಿ ಸಹಕರಿಸಿದ ಡಾ ಸುಭಾಶರೆಡ್ಡಿ, ಗ್ರಂಥಪಾಲಕರು, ಪಿಇಎಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ

ಕೃತಜ್ಞತೆಗಳನ್ನು ತಿಳಿಸಲಾಯಿತು. ವಂದನಾರ್ಪಣೆಯನ್ನು ವೆಬಿನಾರ್ ತಾಂತ್ರಿಕ ಆಯೋಜಕರಾದ ವಿಜಯೇಂದ್ರ ಎಸ್ ಕೆ, ಸಹಾಯಕ ನಿರ್ದೇಶಕರು, ಗಣಕ ಕೇಂದ್ರ ಅವರು ಮಾಡಿದರು. ವೆಬಿನಾರ್ ಮೀಡಿಯಾ ಸಹಾಯಕರಾಗಿ ಲೋಕೇಶ ಎಸ್ ಕೆ ಅವರು ಕಾರ್ಯನಿರ್ವಹಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳಿಸಲಾಯಿತು.

## ಬುಡಕಟ್ಟು ಅಧ್ಯಯನ ವಿಭಾಗ


## ನಡೆಯಬೇಕಾದ ದಾರಿಯ ಪ್ರಮುಖ ಅಂಶಗಳು

- ಗಿರಿಸೀಮೆಯನ್ನು ಪಿಲಿಕುಳ ನಿಸರ್ಗ ಧಾಮದಂತೆ ಬುಡಕಟ್ಟು ವಸ್ತು ಸಂಗ್ರಹಾಲಯವಾಗಿಸಿ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವುದು.
- ಬುಡಕಟ್ಟು ಅಧ್ಯಯನ ವಿಭಾಗದ ಯೋಜನಾ ವರದಿಗಳನ್ನು ಮುದ್ರಿಸುವುದು, ಮಹಾಕಾವ್ಯಗಳನ್ನು ಮತ್ತು ಪ್ರಕಟಿತ ಕೃತಿಗಳನ್ನು ಅನುವಾದಿಸಿ ಮರುಮುದ್ರಿಸುವುದು ಹಾಗೂ ಇವುಗಳನ್ನು ಅಂತರ್ಜಾಲದಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳುವುದು.
- ಬುಡಕಟ್ಟು ಅಧ್ಯಯನ ನಿಯತಕಾಲಿಕೆಯನ್ನು ಅಂತರ್ಜಾಲದಲ್ಲಿ ನಿಯಮಿತವಾಗಿ ಪ್ರಕಟಿಸುವುದು.
- ಬುಡಕಟ್ಟು ಅಧ್ಯಯನ ವಿಭಾಗವನ್ನು ಬುಡಕಟ್ಟು ಅಧ್ಯಯನ ಕೇಂದ್ರ/ಸಂಸ್ಥೆಯಾಗಿ ಮೇಲ್ದರ್ಜೆಗೇರಿಸುವುದು.
- ಬುಡಕಟ್ಟು ಅಧ್ಯಯನ ವಿಭಾಗದ ಚಟುವಟಿಕೆಗಳನ್ನು ಅಂತರ್ಜಾಲ ತಾಣದ ಮುಖೇನ ವಿಶ್ವವ್ಯಾಪಿಯಾಗಿ ನಿರ್ವಹಿಸುವುದು.
- ಅಂತರ್ಶಿಸ್ತೀಯ, ಬಹುಶಿಸ್ತೀಯ ವೈಚಾರಿಕ, ಆನ್ವಯಿಕ ಬುಡಕಟ್ಟುಪರ ಅಧ್ಯಯನ, ತರಬೇತಿ, ಮೌಲ್ಯಮಾಪನ ಮತ್ತು ಪ್ರಕಟಣೆಗಳನ್ನು ವಿಭಾಗ ಕೈಗೊಳ್ಳಬೇಕು.
- ಬೆಳಕಿಗೆ ಬಾರದೇ ಇರುವ ಬುಡಕಟ್ಟು ಲೋಕವನ್ನು ಕನ್ನಡೀಕರಿಸಿ ಡಿಜಿಟಲೀಕರಿಸುವುದು.





Kannada University, Hampi
Vidyaranya - 583276
Department of Tribal Studies
Silver Jubilee Celebration
One day webinar on
Past Review and Future Roadmap




ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–583276
ಬುಡಕಟ್ಟು ಅಧ್ಯಯನ ವಿಭಾಗ
ಬೆಳ್ಳಿಹಬ್ಬದ ಪ್ರಯುಕ್ತ
ಒಂದು ದಿನದ ವೆಬಿನಾರ್
ನಡೆದುಬಂದ ದಾರಿ ಮತ್ತು ನಡೆಯಬೇಕಾದ ದಾರಿ
01 ಜುಲೈ 2020 ಸಮಯ: ಅಪರಾಹ್ನ 3 ರಿಂದ 5 ಘಂಟೆ
ಸರ್ವರಿಗೂ ಆತ್ಮೀಯ ಸ್ವಾಗತ


Kannada University, Hampi
Vidyaranya - 583276
Department of Tribal Studies
Silver Jubilee Celebration
One day webinar on
Past Review and Future Roadmap
of the Department of Tribal Studies
1st July 2020, Kannada University, Hampi.
All are Welcome


E-Certificate
Kannada University, Hampi
Vidyaranya - 583276
Department of Tribal Studies
Silver Jubilee Celebration
This is to certify that Dr/Mr/Ms.
has participated in one day Silver Jubilee webinar on "Past Review and Future roadmap of the Department of Tribal Studies" held on 1st July 2020 at Kannada University, Hampi.
Prof K M Metry
Organising Secretary
Prof A Subbanna Rai
Registrar
Prof S C Ramesh
Hon'ble Vice Chancellor

## ಕನ್ನಡ ವಿಶ್ವವಿದ್ಯಾಲಯ

ಹಂಪಿ, ವಿದ್ಯಾರಣ್ಯ–583276, ಕರ್ನಾಟಕ



### ಬೆಳ್ಳಿಹಬ್ಬದ ವೆಬಿನಾರ್

### ಬುಡಕಟ್ಟು ಅಧ್ಯಯನ ವಿಭಾಗ

### ನಡೆದುಬಂದ ದಾರಿ ಮತ್ತು ನಡೆಯಬೇಕಾದ ದಾರಿ



ಪ್ರಾಸ್ತಾವಿಕ ಮತ್ತು ಸ್ವಾಗತ

**ಪ್ರೊ ಕೆ ಎಂ ಮೇತ್ರಿ**

ಮುಖ್ಯಸ್ಥರು,
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಕ್ಷತೆ

**ಪ್ರೊ ಸ ಚಿ ರಮೇಶ**

ಮಾನ್ಯ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಉದ್ಘಾಟನೆ

**ಪ್ರೊ ಹಿ ಚಿ ಬೋರಲಿಂಗಯ್ಯ**

ಸಂಸ್ಥಾಪಕ ಮುಖ್ಯಸ್ಥರು,
ಬುಡಕಟ್ಟು ಅಧ್ಯಯನ ವಿಭಾಗ
ಹಾಗೂ ವಿಶ್ರಾಂತ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ



### ಪ್ರಾಧ್ಯಾಪಕರ ಪ್ರತಿಕ್ರಿಯೆ



**ಪ್ರೊ ಚಲುವರಾಜು**

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



**ಪ್ರೊ ಗಂಗಾಧರ ದೈವಜ್ಞ**

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



**ಪ್ರೊ ಎ ಎಸ್ ಪ್ರಭಾಕರ**

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

### ಮುಖ್ಯ ಅತಿಥಿಗಳು

**ಪ್ರೊ ಮಾಧವ ಪೆರಾಜೆ**

ಡೀನ್, ವಿಜ್ಞಾನ ನಿಕಾಯ,
ಸಂಸ್ಥಾಪಕ ಉಪನ್ಯಾಸಕರು,
ಬುಡಕಟ್ಟು ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ



**ಪ್ರೊ ಸಿ ಮಹಾದೇವ**

ಡೀನ್
ಸಮಾಜ ವಿಜ್ಞಾನಗಳ ನಿಕಾಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ



**ಪ್ರೊ ಕೇಶವನ್ ಪ್ರಸಾದ್**

ವಿಶ್ರಾಂತ ಪ್ರಾಧ್ಯಾಪಕರು,
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



**Webinar Registration Link: https://forms.gle/RNdNkEfpK3u2oScF6**

## ಸರ್ವರಿಗೂ ಆತ್ಮೀಯ ಸ್ವಾಗತ

**01 ಜುಲೈ 2020**

**ಸಮಯ: ಸಂಜೆ 3 ರಿಂದ 5 ಘಂಟೆ**

## ಕನ್ನಡ ವಿಶ್ವವಿದ್ಯಾಲಯ

ಹಂಪಿ, ವಿದ್ಯಾರಣ್ಯ-583276 ಕರ್ನಾಟಕ



# ಬೆಳ್ಳಿಹಬ್ಬದ ಸಿಂಹಾವಲೋಕನ

ಬುಡಕಟ್ಟು ಅಧ್ಯಯನ ವಿಭಾಗದ

## ವಿದ್ಯಾರ್ಥಿಗಳ ಪ್ರತಿಕ್ರಿಯೆ

ಬುಡಕಟ್ಟು ಅಧ್ಯಯನ ವಿಭಾಗದ ಅಲುಮ್ನಿ ಮತ್ತು ಪ್ರಸುತ್ತ
ಎಂ ಫಿಲ್ ಹಾಗೂ ಪಿಎಚ್.ಡಿ ಸಂಶೋಧನಾರ್ಥಿಗಳು

## ವೆಬಿನಾರ್ ತಾಂತ್ರಿಕ ಸಹಾಯಕರು



**ಶಂಕರಗೌಡ ಎಸ್ ಜಿ**
ಸಹಾಯಕ ಗ್ರಂಥಪಾಲಕರು,
ಅಕ್ಷರ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ



**ವಿಜಯೇಂದ್ರ ಎಸ್ ಕೆ**
ಸಹಾಯಕ ನಿರ್ದೇಶಕರು,
ಗಣಕ ಕೇಂದ್ರ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಸರ್ವರಿಗೂ ಆತ್ಮೀಯ ಸ್ವಾಗತ



**ಡಾ ಕೆ ಎಂ ಮೇತ್ರಿ**
ಮುಖ್ಯಸ್ಥರು ಹಾಗೂ ವೆಬಿನಾರ್ ಆಯೋಜಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



**ಡಾ ಎ ಸುಬ್ಬಣ್ಣ ರೈ**
ಮಾನ್ಯ ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

**ಉಚಿತ ನೋಂದಣಿ**

**Zoom Meeting ID: 940 034 2679**
**Password: KUH2020**

ಮೀಡಿಯಾ ಸಹಾಯಕರು



**ಲೊಕೇಶ ಎಸ್ ಕೆ**
ಅತಿಥಿ ಉಪನ್ಯಾಸಕರು,
ಪತ್ರಿಕೋದ್ಯಮ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಭಾಗವಹಿಸಿದ ಎಲ್ಲಾ ಅಭ್ಯರ್ಥಿಗಳಿಗೆ ಇ-ಪ್ರಮಾಣ ಪತ್ರವನ್ನು ನೀಡಲಾಗುವುದು**

ಸಂಪರ್ಕ ವಿಳಾಸ :
ಡಾ.ಕೆ.ಎಂ.ಮೇತ್ರಿ: 9448632685 ವಿಜಯೇಂದ್ರ ಎಸ್.ಕೆ: 9448172294 ಶಂಕರಗೌಡ ಎಸ್.ಜಿ : 8123073002


KANNADA UNIVERSITY
HAMPI, VIDYARANYA-583276, KARNATAKA
SILVER JUBILEE WEBINAR ON
Department of Tribal Studies
Past Review and Future Roadmap
Introduction and Welcome
Prof K M Metry
HOD
Dept. of Tribal Studies
Kannada University, Hampi
Presidential address
Prof S C Ramesh
Honourable Vice Chancellor
Kannada University, Hampi
Faculty Views
Prof Chaluvaraju
Dept. of Tribal Studies
Kannada University,Hampi
Prof Gangadhar Daivadnya
Dept. of Tribal Studies
Kannada University, Hampi
Prof A S Prabhakar
Dept. of Tribal Studies
Kannada University, Hampi
Inaugural address
Prof H C Boralingaiah
Founding Head
Dept. of Tribal Studies
and Ex-Vice Chancellor
Kannada University, Hampi
Chief Guests
Prof Madhava Peraje
Dean, School of Science,
Founding Lecturer,
Dept. of Tribal Studies
Kannada University, Hampi
Prof C Mahadeva
Dean,
School of Social Science
Kannada University, Hampi
Prof Keshavan Prasad
Retd. Professor
Dept. of Tribal Studies
Kannada University, Hampi
YouTube LIVESTREAM
https://www.youtube.com/channel/UCpZpia_UKE43PCcxEb23ofQ
All are Cordially Invited
01st July 2020
3 PM to 5 PM

# KANNADA UNIVERSITY

HAMPI, VIDYARANYA-583276, KARNATAKA



## Silver Jubilee Celebration

### Department of Tribal Studies

## Participants Feedback

**Department Alumni, present M Phil, Ph D Scholars and Participants**

## Webinar Technical Coordinators



**Shankaragouda S G**
**Assistant Librarian**
Akshara Central Library
Kannada University, Hampi



**Vijayendra S K**
**Assistant Director**
Computer Centre
Kannada University, Hampi



**Media Assistance**
**Lokesh S K**
Guest Faculty
Dept. of Journalism
Kannada University, Hampi

## All are Cordially Invited



**Prof K M Metry**
**HOD and Organising Secretary**
Dept. of Tribal Studies
Kannada University, Hampi



**Prof A Subbanna Rai**
**Registrar**
Kannada University, Hampi

**Zoom Meeting ID: 940 034 2679**
**Password: KUH2020**

***Free Registration***

**Webinar Registration Link: https://forms.gle/RNdNkEfpK3u2oScF6**

*E-Certificates will be issued to the registered participants*

**Contact Details:**
**Dr K M Metry: 9448632685  Shankaragouda S G : 8123073002  Vijayendra S K: 9448172294**
**E-mail : dtswebinar@gmail.com**